ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 30 ಜುಲೈ 26, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ಲೋಕಸಭೆಗೆ ತಕ್ಷಣವೇ ಮಧ್ಯಂತರ ಚುನಾವಣೆ ನಡೆಯಬೇಕು

– ಸಿ. ಪಿ. ಐ. [ಎಂ] ಒತ್ತಾಯ

ಅಧಿಕಾರದ ಕುರ್ಚಿಗೆ ಅತುಕೊಂಡಿರುವುದಕ್ಕೆ ಬದಲಾಗಿ ಜನರ ಬಳಿಗೆ ಹೋಗಿ ಮತ್ತೆ ಅವರ ಒಪ್ಪಿಗೆ ಪಡೆಯಿರಿ ಎಂದು ಸಿ.ಪಿ.ಐ. [ಎಂ] ರಾಜೀವ ಗಾಂಧಿಯವರಿಗೆ ಒತ್ತಾಯ ಮಾಡಿದೆ. ಪತ್ರಿಕೆಗಳಿಗೆ ಸೋಮವಾರ ಬಿಡುಗಡೆ ಮಾಡಿದ, ಮುಂದೆ ಬರಲಿರುವ 26.7.87ರ "ಪೀಪಲ್ಸ್ ಡೆಮಾಕ್ರಸಿ" ಯ ಸಂಪಾದಕೀಯದಲ್ಲಿ ಪಕ್ಷ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ದಿನ ದಿನಕ್ಕೂ ಕಾಂಗ್ರೆಸ್(ಐ) ಒಳಗಿನ ಬಿಕ್ಕಟ್ಟು ಹಾಗೂ ಭಾರತದ ರಾಜಕೀಯ ಆರ್ಥಿಕ ಬಿಕ್ಕಟ್ಟು ಆಳವಾಗುತ್ತಿರುವುದನ್ನು ಹಿಮ್ಮೆಟ್ಟಿಸಬೇಕಾದರೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾವಣೆ ನಡೆಸುವುದೊಂದೇ ಮಾರ್ಗ ಎಂದು ಪಕ್ಷ ಅಭಿಪ್ರಾಯ ಪಟ್ಟಿದೆ. ಆಡಳಿತ ಪಕ್ಷವಾದ ಕಾಂಗ್ರೆಸ್(ಐ)ನಲ್ಲಿ ಹಲವು ಕಾಲದಿಂದ ಒಳಗೊಳಗೇ ಬೇಯುತ್ತಿದ್ದ ಬಿಕ್ಕಟ್ಟು ಈಗ ಸಿಡಿದು ಹೊರಬಂದಿದೆ. ಈ ಬಿಕ್ಕಟ್ಟಿನಲ್ಲಿ ಮೊದಲು ಕಾಲ್ಕೆರೆದು ಗುಂಡು ಹಾರಿಸಿದ್ದು ಕಾಂಗ್ರೆಸ್ [ಐ]ಅಧ್ಯಕ್ಷರಾದ ರಾಜೀವ್ ಗಾಂಧಿಯವರೇ. ರಾಷ್ಟ್ರಪತಿ ಚುನಾವಣೆಗೆ ಸಂಬಂಧಿಸಿ ಈ ಬಿಕ್ಕಟ್ಟಿನ ಪರಿಸ್ಥಿತಿ ಪ್ರಾರಂಭವಾಯಿತು.

ಮಾಜಿ ಕೇಂದ್ರ ಮಂತ್ರಿಗಳಾದ ಅರುಣ್ ನೆಹ್ರು, ಆರಿಫ್ ಮಹಮ್ಮದ್ ಖಾನ್, ವಿ.ಸಿ. ಶುಕ್ಲಾರವರನ್ನು ಒಂದು ಶೋಕಾಸ್ ನೋಟೀಸ್ ಕೂಡ ನೀಡದೆ ಹೊರಗೆಸೆಯಲಾಯಿತು. ಹಿಂದಿನ ಕೇಂದ್ರ ಮಂತ್ರಿಗಳಾದ ಅರುಣ್‌ಸಿಂಗ್ ಹಾಗೂ ಮುಫ್ತಿಮಹಮ್ಮದ್ ಸಯೀದ್‌ರವರ ರಾಜೀನಾಮೆಗಳು ಪ್ರತ್ಯೇಕವಾಗಿ ಜನರ ಗಮನವನ್ನು ಸೆಳೆದಿವೆ. ಪಕ್ಷದೊಳಗಿನ ವಿರೋಧವನ್ನು ಹತ್ತಿಕ್ಕಬೇಕಾದರೆ ಆಕ್ರಮಣ ಮಾಡುವುದೇ ದಾರಿಯೆಂದು ರಾಜೀವ ಗಾಂಧಿ ತೀರ್ಮಾನಿಸಿದಂತೆ ಕಾಣುತ್ತಿದೆ. ಯಾವುದೇ ಒಂದು ರಾಜಕೀಯ ಪಕ್ಷ ಪ್ರಜಾಸತ್ತಾತ್ಮಕ ರೀತಿ ನೀತಿಗಳನ್ನು ಅನುಸರಿಬೇಕು. ಪಕ್ಷದಸದಸ್ಯರಿಗೆ ಶಿಸ್ತಿನ ಪಾಠ ಕಲಿಸಬೇಕಾದರೂ ಕೂಡ ಯಾವುದಾದರೊಂದು ರೀತಿಯ ಪ್ರಜಾಸತ್ತಾತ್ಮಕ ಕ್ರಮಗಳನ್ನು ಅನುಸರಿಸಬೇಕು. ಆದರೆ ದಿನ ಪತ್ರಿಕೆಗಳ ಮೂಲಕ ಪ್ರಕಟನೆನೀಡಿ ಹೊರದಬ್ಬುವ ಈ ಕ್ರಮ ಎಲ್ಲಾ ಪ್ರಜಾಸತ್ತಾತ್ಮಕ ರೀತಿ ನೀತಿಗಳನ್ನುಗಾಳಿಗೆ ತೂರಿದಂತಾಗಿದೆ.

ಕಾಂಗ್ರೆಸ್ [ಐ] ಪಕ್ಷ ಹಾಗೂ ಸರಕಾರ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೆಲಸ ಮಾಡಬೇಕು ಎಂಬ ಅಭಿಪ್ರಾಯಕ್ಕೆ ದನಿಕೊಟ್ಟ ವಿ.ಪಿ. ಸಿಂಗ್‌ರವರನ್ನು ಕಾಂಗ್ರೆಸ್ (ಐ) ನಿಂದ ಹೊರತಳ್ಳಲಾಯಿತು. ಈ ರೀತಿಯ ಶಿಸ್ತಿನ ಕ್ರಮಗಳು ಮತ್ತೆ ಯಾವ ರೀತಿ ಕೈಗೊಂಡವರಿಗೇ ಹಿಂತಿರುಗಿಸಿ ಹೊಡೆಯುವುದೆಂಬುದನ್ನು ಯಾರು ಬೇಕಾದರೂ ಊಹಿಸಿಕೊಳ್ಳಬಹುದು. ಆರಿಫ್ ಮಹಮ್ಮದ್ ಖಾನ್, ರವರ ಮೇಲೆ ದೈಹಿಕ ಧಾಳಿನಡೆಸಿದ ಯುವ ಕಾಂಗ್ರೆಸ್ [ಐ] ನ ಕ್ರಮ ಕಾಂಗ್ರೆಸ್[ಐ] ಮುಟ್ಟಿರುವ ಹತಾಶ, ನಿರಾಶ ಸ್ಥಿತಿಯನ್ನು ತೋರಿಸುತ್ತದೆ.ಈ ಶಿಸ್ತಿನಕ್ರಮಗಳು ಕೆಲವೇ ನಾಯಕರು ಎಂಪಿಗಳ ಮೇಲೆ ಮಾತ್ರ ಅಲ್ಲ. ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯ ಕರ್ತರ ಮೇಲೆದೊಡ್ಡ ರೀತಿಯಲ್ಲಿ ಈ ಕ್ರಮ ಕೈಗೊಂಡರೆ ಆದೇನೂ ಆಶ್ಚರ್ಯಕರವಲ್ಲ.

ಕಾಂಗ್ರೆಸ್ [ಐ] ಹಲವಾರು ವರ್ಷಗಳಿಂದ ಸಂಘಟಿತವಾಗಿ ಕೆಲಸ ಮಾಡುವ ಪಕ್ಷವಾಗಿ ಉಳಿದಿಲ್ಲ. ರಾಜಕೀಯ ಅಧಿಕಾರದ ಸುತ್ತ ಮುತ್ತ ರೊಟ್ಟಿ ಚೂರಿಗಾಗಿ ಮುತ್ತಿಕೊಂಡಲೋಭಿಗಳ ಗುಂಪು ಎನ್ನುವಂತಹ ಅಧೋಗತಿಗೆ ಇಳಿದಿದೆ. ಹುಳಿತುನಾರುತ್ತಿದೆ. ಅದೊಂದು ಸಂಘಟನೆಯೇ ಅಲ್ಲ. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ವಿಶ್ವಾಸ ಹುಟ್ಟಿಸುವಂತಹ ಚಳುವಳಿಯಾಗಿ ವಿರೋಧ ಪಕ್ಷಗಳು ಜನರ ಮುಂದೆ ಮೂಡಿಲ್ಲ. ಕಾಂಗ್ರೆಸ್ [ಐ] ಪಕ್ಷ ಆಡಳಿತ ಪಕ್ಷವಾಗಿಮುಂದುವರಿದಿರುವುದಕ್ಕೆ ಇದೊಂದೇ ಕಾರಣ. ಈ ದುರಾಡಳಿತವನ್ನು ಜನರು ಇನ್ನೂ ಸಹಿಸುತ್ತಾರೆಂದು ರಾಜೀವ ಗಾಂಧಿ ತಿಳಿದುಕೊಂಡರೆ ಅದು ಮೂರ್ಖತನವಾಗುತ್ತದೆ. ಈಅವಸ್ಥೆಯಲ್ಲಿರುವ ಕಾಂಗ್ರೆಸ್ [ಐ]ಯನ್ನು ಎದುರಿಸಿ ಹೊಸ ಚಳುವಳಿ ಹೂಡುವುದು ಅನಿವಾರ್ಯ. ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ಕಾಂಗ್ರೆಸ್ (ಐ) ರಾಜ್ಯ ಸರ್ಕಾರಗಳ ವಿರುದ್ಧ ಎದ್ದು ಬರುತ್ತಿರುವ ಅಸಂತೃಪ್ತಿಯನ್ನು ಅಮಿತಾಭ್ ಬಚ್ಚನ್‌ನ ರಾಜೀನಾಮೆ, ಅವನ ಸೋದರ ಅಜಿತಾಭ್ ಬಚ್ಚನ್‌ನ ಮೇಲೆ ವಿಚಾರಣೆ ನಡೆಸುವಂತಹ ನಾಟಕೀಯ ಕ್ರಮಗಳಿಂದ ತಡೆಯುವುದು ಸಾಧ್ಯವಿಲ್ಲ. ದೇಶದಲ್ಲಿ ಗಂಡಾಂತರಕಾರಿ ಪರಿಸ್ಥಿತಿ ಹೆಚ್ಚುತ್ತಿದೆ. ವಿಚ್ಛಿದ್ರಕಾರಿಗಳ ಬಲ ಹೆಚ್ಚುತ್ತಿದೆ. ತೀವ್ರವಾದಿಗಳ ಕೊಲೆ ಪಾತಕ ಕೃತ್ಯಗಳು ಹೆಚ್ಚುತ್ತಿವೆ. ಜಾತಿ ಜಗಳಗಳು ಹೆಚ್ಚುತ್ತಿವೆ. ಆದ್ದರಿಂದ ಎಲ್ಲಾ ಕಡೆಯೂ

[8ನೇ ಪುಟ ನೋಡಿ]

ಎಡಪಂಥೀಯ ಸಮನ್ವಯ ಸಮಿತಿ ಒತ್ತಾಯ

ಸಿ.ಪಿ.ಐ. (ಎಂ),ಸಿ.ಪಿ.ಐ.ಹಾಗೂ ಆರ್.ಎಸ್.ಪಿ. ಪಕ್ಷಗಳ ಸಂಸದೀಯ ರಂಗದ ಸಮನ್ವಯಸಮಿತಿ ಪ್ರಧಾನಿಯವರು ಜನತೆಯ ವಿಶ್ವಾಸ ಕಳೆದುಕೊಂಡಿರುವುದರಿಂದ ಮಧ್ಯಂತರ ಚುನಾವಣೆ ನಡೆಸಬೇಕೆಂದು ಇಂದಿನ ರಾಜಕೀಯ ಬಿಕ್ಕಟ್ಟಿನಲ್ಲಿ ಇದೊಂದೇ ಪ್ರಜಾಸತ್ತಾತ್ಮಕ ಪರಿಹಾರವೆಂದು ತಿಳಿಸಿದೆ.

ಅಧ್ಯಕ್ಷೀಯ ಚುನಾವಣೆಯ ನಂತರ

– ಕಾ|| ಇ. ಎಂ. ಎಸ್.

ರಾಷ್ಟ್ರಪತಿ ಚುನಾವಣೆ ಮುಗಿದಿದೆ. ಕಳೆದ ಒಂದು ತಿಂಗಳಲ್ಲಿದ್ದ ಸಂಭ್ರಮ ಮುಗಿದಿದೆ. ಕಾಂಗ್ರೆಸ್(ಐ) ಅಭ್ಯರ್ಥಿ ಗೆದ್ದಿದ್ದಾರೆ. ಆದರೆ ಇದರೊಂದಿಗೆ ಆಳುವ ಪಕ್ಷದಲ್ಲಿ ಮತ್ತು ಕೇಂದ್ರ,ರಾಜ್ಯಗಳಲ್ಲಿರುವ ಅದರ ಸರ್ಕಾರಗಳಲ್ಲಿರುವ ಆಂತರಿಕ ಕಚ್ಚಾಟಗಳು ಮುಗಿದಿದೆ ಎಂದೇನಿಲ್ಲ. ಆದರೆ ಬದಲು ಇವು ಹೆಚ್ಚಾಗುವ ಸೂಚನೆಗಳು ಕಂಡು ಬರುತ್ತಿವೆ. ಕಾಂಗ್ರೆಸ್ ಹೈಕಮಾಂಡ್ ಎಲ್ಲಾ ರಾಜ್ಯಗಳ ಭಿನ್ನಮತೀಯರಿಗೂ, ರಾಷ್ಟ್ರಪತಿ ಚುನಾವಣೆಗಳ ನಂತರ ರಾಜ್ಯ ಮಂತ್ರಿಮಂಡಲದಲ್ಲಿ, ಪಕ್ಷದ ಸಂಘಟನೆಯಲ್ಲಿ ಅವರು ಕೇಳಿರುವ ಬದಲಾವಣೆಗಳನ್ನು ಮಾಡಲಾಗುತ್ತದೆ ಎಂದು ಭರವಸೆ ನೀಡಿತ್ತು. ಆದರೆ ಎಷ್ಟರ ಮಟ್ಟಿಗೆ ಈ ಭರವಸೆಗಳನ್ನು ಈಡೇರಿಸಲಾಗುತ್ತದೆ, ಮತ್ತು ಆ ಭರವಸೆಯಂತೆ ನಡೆದರೆ ಅದರ ರಾಜಕೀಯ ಪರಿಣಾಮಗಳೇನು ಎಂದು ಕಾದು ನೋಡಬೇಕಾಗಿದೆ.

ಇದಕ್ಕಿಂತಲೂ ಮುಖ್ಯವಾಗಿ ಹರಿಯಾಣದಲ್ಲಿ ಅವಮಾನಕಾರಿ ಪರಾಜಯದ ನಂತರ, ಅದರಲ್ಲೂ ವಿಶೇಷವಾಗಿ ಮಾರ್ಚ್ 85ರ ನಂತರ ನಡೆದ ಪ್ರತಿ ರಾಜ್ಯ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪರಾಜಯದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ಗೆ ಎಲ್ಲಾ ಹಂತಗಳಲ್ಲಿ ಆತ್ಮ ಪರೀಕ್ಷೆ ಆರಂಭವಾಗಿದೆ. ಮೂಲಭೂತ ನೀತಿಗಳಲ್ಲಿ ಮಾರ್ಪಾಟು ಮಾಡದೆ ಕಾಂಗ್ರೆಸ್ ನುಚ್ಚುನೂರಾಗುವುದನ್ನು ತಡೆಯುವುದು ಕಷ್ಟ ಎಂಬ ಭಾವನೆ ಕಾಂಗ್ರೆಸ್ಸಿಗರಲ್ಲಿ ಬಲವಾಗಿದೆ.

ಮೂರು ಮುಖ್ಯ ನೀತಿಗಳ ಬಗ್ಗೆ ಭಿನ್ನಮತೀಯರು ನೀತಿ ಮಾರ್ಪಾಡುಗಳಿಗೆ ಒತ್ತಾಯಿಸುತ್ತಿದ್ದಾರೆ. ಕೋಮುವಾದದ ಬೆಳವಣಿಗೆ, ಆರ್ಥಿಕ ಅಪರಾಧಗಳು ಮತ್ತು ಪಕ್ಷದ ಆಂತರಿಕ ಪ್ರಜಾಸತ್ತೆಯ ಅಭಾವ. ಬೋಫೋರ್ಸ್ ಪ್ರಕರಣ, ಸಬ್‌ಮೆರಿನ್ ಪ್ರಕರಣ ಮುಂತಾದ ರಕ್ಷಣಾ ಖರೀದಿಯಲ್ಲಿ ಕಮಿಷನ್, ಲಂಚ ಪಡೆದವರಿಗೆ ತಕ್ಕ ಶಿಕ್ಷೆ ಕೊಡುವ ಪ್ರಶ್ನೆ ಸಹ ಎತ್ತಲಾಗಿದ. ಎಷ್ಟರ ಮಟ್ಟಿಗೆ ಭಿನ್ನಮತೀಯರು ನಿಜವಾಗಿ ಕಾಂಗ್ರೆಸ್ ನೀತಿಗಳಲ್ಲಿ ಬದಲಾವಣೆಗಳಿಗೆ ಹೋರಾಡುತ್ತಿದ್ದಾರೆ ಅಥವಾ ಇದು ತಮ್ಮ ಗುಂಪು ಬಲಪಡಿಸುವ [illegible]ವೇ ಎಂದು ಕಾದು ನೋಡಬೇಕಾಗಿದೆ. ಆದರೆ ಚುನಾವಣಾ ಪರಾಜಯದಿಂದ ಆತ್ಮಪರೀಕ್ಷೆಯ ಪ್ರಕ್ರಿಯೆ ಬಲವಾಗಲಿದೆ. ಕಾಂಗ್ರೆಸ್ ಗುಂಪುಗಾರಿಕೆಗಿಂತ ಹೆಚ್ಚಾಗಿ, ನಿಲುವುಗಳ ತಿಕ್ಕಾಟದಲ್ಲಿ ಆಸಕ್ತಿ ಇರುವವರೆಲ್ಲರೂ ಈ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆಯೆಂದು ಸಂತೋಷ ಪಡಬಹುದು.

ರಾಷ್ಟ್ರಪತಿ ಚುನಾವಣೆಯ ಫಲಿತಾಂಶ ಹೊರಬೀಳುವ ಮೊದಲೇ ಕಾ|| ಇ. ಎಂ. ಎಸ್. ಕಾಂಗ್ರೆ ಪಕ್ಷದಲ್ಲಿ ನಡೆಯಬಹುದಾದ ಘಟನೆಗಳನ್ನು ಮುಂಗಂಡು ಬರೆದ ಲೇಖನ ಇದು. ನಂತರದ ಬೆಳವಣಿಗೆಗಳು ಕಾ|| ಇ. ಎಂ. ಎಸ್. ರವರ ಮಾತು ಎಷ್ಟು ನಿಜ ಎಂಬುದನ್ನು ಸಾಬೀತುಪಡಿಸಿವೆ.

ಈ ಪ್ರಕ್ರಿಯೆಗೆ ಕುಮ್ಮಕ್ಕು ಕೊಟ್ಟಿರುವ ಒಂದು ಪ್ರಮುಖ ಬೆಳವಣಿಗೆಯೆಂದರೆ, ವಿರೋಧ ಪಕ್ಷಗಳ ಅಧ್ಯಕ್ಷ ಅಭ್ಯರ್ಥಿ ಶ್ರೀ ಕೃಷ್ಣ ಐಯ್ಯರ್‌ತೆಗೆದುಕೊಂಡ ಸ್ಪಷ್ಟ, ದಿಟ್ಟ ನಿಲುವು. ಅಧ್ಯಕ್ಷರ ಅಧಿಕಾರದ ಬಗ್ಗೆ ಅವರು ತೆಗೆದುಕೊಂಡ ಈ ನಿಲುವು ಚುನಾವಣಾ ಪ್ರಚಾರಕ್ಕೆ ನೀತಿಯುತ ಹೋರಾಟದ ಗಂಭೀರತೆ ತಂದುಕೊಟ್ಟಿತು.

ಅಧ್ಯಕ್ಷರ ಅಧಿಕಾರದ ಬಗ್ಗೆ ಸಂವೈಧಾನಿಕವಾಗಿ ಸರಿಯಾದ ನೀತಿಗೆ ಎರಡು ಕಡೆಯಿಂದ ಅಪಾಯ ಬಂದಿತ್ತು. ಅಧ್ಯಕ್ಷರನ್ನು ಪ್ರಧಾನ ಮಂತ್ರಿಯ ಕೈಗೊಂಬೆ ಮಾಡುವ ಆಳುವ ಕಾಂಗ್ರೆಸ್(ಐ)ನ ನಿಲುವು ಒಂದು ಕಡೆಯಿಂದ, ಇನ್ನೊಂದು ಕಡೆಯಿಂದ ಕೆಲವು ವಿರೋಧ ಪಕ್ಷಗಳು, ಗುತ್ತೇದಾರಿ ಬಂಡವಾಳಶಾಹಿ ಪತ್ರಿಕೆಗಳು ಮತ್ತಿತರ ನಿಲುವು ಅಧ್ಯಕ್ಷರಿಗೆ ಸಂವೈಧಾನಿಕವಾಗಿರುವ ಅಧಿಕಾರಗಳನ್ನು ನೀಡಿ, ಪ್ರಧಾನ ಮಂತ್ರಿಯನ್ನು ಬಲಹೀನ ಮಾಡುವಂತಹುದು. ಈ

[8ನೇ ಪುಟ ನೋಡಿ]

ಸೆಪ್ಟೆಂಬರ್ 7-13 ರ ಚಳುವಳಿಯನ್ನು ಯಶಸ್ವಿಗೊಳಿಸಿರಿ

ಕಾ|| ಶಂಕರಯ್ಯ

ಸಂಗ್ರಹಾನುವಾದ :
ಪಿ. ರಾಮಚಂದ್ರರಾವ್

ಕಾ|| ಶಂಕರಯ್ಯ, ಅಖಿಲ ಭಾರತ ಕಿಸಾನ್ ಸಭಾ ಪ್ರಧಾನ ಕಾರ್ಯದರ್ಶಿಯವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯನ್ನು ಉದ್ದೇಶಿಸಿ ಕೊಟ್ಟ ಭಾಷಣದ ಸಾರಾಂಶ ಹೀಗಿದೆ.

"ಪುನಃ ನಿಮ್ಮ ಜತೆ ಇದ್ದು ನಿಮ್ಮ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ನಿಮ್ಮ ಚಟುವಟಿಕೆಗಳನ್ನು ಚುರುಕುಗೊಳಿಸುವುದರಲ್ಲಿ ಸಹಾಯ ನೀಡಲು ನನಗೆ ಬಹಳ ಸಂತೋಷವಾಗುತ್ತದೆ."

1987 ಏಪ್ರಿಲ್ 24-25ರಂದು ಒರಿಸ್ಸಾದ ಕಟಕಿನಲ್ಲಿ ಅಖಿಲ ಭಾರತ ಕಿಸಾನ್ ಕೌನ್ಸಿಲ್ ಸಭೆ ಸೇರಿ ಎರಡು ಪ್ರಮುಖ ನಿರ್ಣಯಗಳನ್ನು ಕೈಗೊಂಡಿತು.

ಕ್ಷಾಮ ಪರಿಹಾರ

ಒಂದನೆಯದಾಗಿ, ದೇಶದಲ್ಲಿ 13 ರಾಜ್ಯಗಳಲ್ಲಿ ವ್ಯಾಪಕವಾಗಿಯೂ ಒರಿಸ್ಸಾ, ಮತ್ತು ಆಂಧ್ರ ಪ್ರದೇಶಗಳಲ್ಲಿ ವಿಶೇಷವಾಗಿಯೂ, ಹರಡಿರುವ ಬರಗಾಲದ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ, ಒರಿಸ್ಸಾದ ಕಾಲಾಹಂಡಿಯಲ್ಲೂ ಆಂಧ್ರ ಪ್ರದೇಶದ ಮೇಹಬೂಬ್ ನಗರದಲ್ಲೂ ಉಪವಾಸದಿಂದ ಜನ ಸತ್ತಿರುವುದನ್ನು ಗಣನೆಗೆ ತೆಗೆದುಕೊಂಡು ಕೂಡಲೇ ಎಲ್ಲಾ ರಾಜ್ಯಗಳ ಕಿಸಾನ್ ಸಭಾ ಘಟಕಗಳು ಕಾರ್ಯೋನ್ಮುಖರಾಗಿ 'ಬರಗಾಲ ಪರಿಹಾರ' ವನ್ನೊದಗಿಸಬೇಕು.

ಈ ತೀರ್ಮಾನದ ಆಧಾರದಲ್ಲಿ ಪಾರ್ಲಿಮೆಂಟ್ ಸದಸ್ಯರೂ ಅಖಿಲ ಭಾರತ ಕಿಸಾನ್ ಸಭೆಯ ಕಾರ್ಯದರ್ಶಿಗಳೂ ಸೇರಿದ ಒಂದು ಪ್ರತಿನಿಧಿ ಮಂಡಳಿಯೂ ಕಾಲಾಹಂಡಿಗೂ ಮೇಹಬೂಬ್ ನಗರಕ್ಕೂ ಭೇಟಿ ಇತ್ತು ಪರಿಸ್ಥಿತಿಯನ್ನು ಪರೀಕ್ಷಿಸಿ ಯಥಾರ್ಥವಾದ ವರದಿಯನ್ನು ಪ್ರಕಟಿಸಿದರು. ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಜತೆಗೂಡಿ ಮಾತನಾಡಿ ಗಂಭೀರ ಬರಗಾಲ ಪರಿಹಾರದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಒರಿಸ್ಸಾದ ಮುಖ್ಯ ಮಂತ್ರಿ ಈ ಪ್ರತಿನಿಧಿ ಮಂಡಳಿಯು ಒರಿಸ್ಸಾದ ಕಾಂಗ್ರೆಸ್ (ಐ) ಸರ್ಕಾರವನ್ನು ಬಯಲಿಗೆಳೆಯಲು ಬಂದಿದೆ. ಎಂದು ಗ್ರಹಿಸಿ ವಿರೋಧ ಹೇಳಿಕೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಿದರು. ಆದರೂ ಬರಗಾಲದ ಜನತೆಗೆ ಪರಿಹಾರ ಒದಗಿಸುವುದರಲ್ಲಿ ಇದರ ಪರಿಣಾಮ ತುಂಬಾ ಆಗಿದೆ.

ಅದಲ್ಲದೆ ಪಶ್ಚಿಮ ಬಂಗಾಳದಿಂದ ಸಂಗ್ರಹ ಮಾಡಿ ಆ ಸ್ಥಳಗಳಲ್ಲಿ ಹಂಚಲಾದ ಧಾನ್ಯ ಹಾಗೂ ಔಷಧಿಗಳು ಬಹಳಷ್ಟು ಅಖಿಲ ಭಾರತ ಕಿಸಾನ್ ಸಭಾವನ್ನು ಜನತೆ ಈ ಕಾರ್ಯಕ್ಕಾಗಿ ಮೆಚ್ಚುವಂತಾಗಿದೆ.

"ಹಲವಾರು ರಾಜ್ಯಗಳಿಂದ ಕಿಸಾನ್ ಸಭಾ ಘಟಕಗಳು ಸಹಾಯಸಂಗ್ರಹಿಸಿ ಕಳುಹಿಸಿದ ಹಣದಿಂದ ಆಂಧ್ರದಲ್ಲಿ ಗಂಜಿ ಕೇಂದ್ರಗಳನ್ನು ಆಂಧ್ರದ ಕಿಸಾನ್ ಸಭಾ ಆಶ್ರಯದಲ್ಲಿ ಮುಂದುವರಿಸಿಕೊಂಡು ಹೋಗಲು ಸಹಾಯಕವಾಗಿದೆ."

ಎರಡನೆಯದಾಗಿ, ದೇಶದಾದ್ಯಂತವಾಗಿ ದೇಶದಲ್ಲಿ ರೈತಾಪಿ ಜನತೆ ಗ್ರಾಮಾಂತರ ಪ್ರದೇಶಗಳ ಅತಿ ಮುಖ್ಯ ಬೇಡಿಕೆಗಳನ್ನು ಪ್ರಾದೇಶಿಕವಾಗಿ ರಾಜ್ಯಗಳಲ್ಲಿ ರೈತರ ವಿಶಿಷ್ಟ ಬೇಡಿಕೆಗಳನ್ನು ಮುಂದಿಟ್ಟು ಸೆಪ್ಟೆಂಬರ್ 7ರಿಂದ 13ರವರೆಗೆ ಅಖಿಲ ಭಾರತ ಕಿಸಾನ್ ಸಭೆಯಡಿಯಲ್ಲಿ ಪಿಕೆಟಿಂಗ್ ಕಾರ್ಯಚರಣೆ ನಡೆಸಬೇಕು.

ಅಖಿಲ ಭಾರತ ಹೋರಾಟ

ಹಲವಾರು ವರ್ಷಗಳ ನಂತರ ಎ.ಐ ಕೆ.ಎಸ್. ನೇತೃತ್ವದಲ್ಲಿ ಅಖಿಲ ಭಾರತ ತಳಹದಿಯಲ್ಲಿ ಇಂತಹ ಹೋರಾಟದ ಕಾರ್ಯಕ್ರಮಇದೀಗ ನಡೆಯುತ್ತಿದೆ. ಈ ಚಳುವಳಿ ಮತ್ತು ಹೋರಾಟವನ್ನು ಅತ್ಯಂತ ಯಶಸ್ವಿಯಾಗಿಮಾಡುವುದು, ಇದರಲ್ಲಿದೇಶದ ಇಡೀ ರೈತ ಸಮೂಹಗಳನ್ನು ತಮ್ಮ ಬೇಡಿಕೆಗಳ ಕುರಿತು ಜಾಗೃತಗೊಳಿಸಿ ಲಕ್ಷಗಟ್ಟಲೆಯಲ್ಲಿ ರೈತ ಸ್ವಯಂ ಸೇವಕರು, ರೈತರ ಈ ಪ್ರಮುಖ ಬೇಡಿಕೆಗಳಿಗಾಗಿ ಪಿಕೆಟಿಂಗ್ ಮಾಡಿ ದಸ್ತಗಿರಿ ಜೈಲುವಾಸ ಅನುಭವಿಸಲು ಮುಂದೆ ಬರುವಂತೆ ಮಾಡುವುದು ನಮ್ಮ ಮುಂದಿರುವ ತುರ್ತಿನ ಕಾರ್ಯಭಾರ.

ಬೇಡಿಕೆಗಳಲ್ಲಿ ಅಖಿಲ ಭಾರತ ಮಹತ್ವದ ಮೂರು ಬೇಡಿಕೆಗಳನ್ನು ಅವರು ಈ ಕೆಳಗಿನಂತೆ ವಿವರಿಸಿದರು.

ಭೂ ಸುಧಾರಣೆಗಳಿಗೆ ತಿದ್ದುಪಡಿ

ಒಂದನೆಯ ಬೇಡಿಕೆ, ಭೂ-ಸುಧಾರಣೆ ಕಾನೂನುಗಳನ್ನು ತಿದ್ದುಪಡಿಮಾಡಿ ಅದರಲ್ಲಿ ಮುಖ್ಯವಾಗಿ ಭೂ-ಪರಿಮಿತಿ ಕಲಂಗಳಲ್ಲಿರುವ ದೋಷಗಳನ್ನು ಕಿತ್ತುಹಾಕಿ ಕಾನೂನು ಬಾಹಿರವಾಗಿಯೂ ಕಾನೂನಿನ ದೋಷಯುಕ್ತ ಕಲಮುಗಳ ಸಹಾಯದಿಂದಲೂ ಬಚ್ಚಿಟ್ಟ ಲಕ್ಷಾಂತರ ಎಕ್ರೆ ಭೂಮಿಯನ್ನು ಹೊರಗೆಳೆದು ಭೂಹೀನ ರೈತರಿಗೆ ಹಂಚುವಂತೆ ಮಾಡುವ ಬೇಡಿಕೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಈ ಕುರಿತು ನಿರೂಪಿಸಿದ ತಿದ್ದುಪಡಿಗಳ ಆಧಾರದಲ್ಲಿ ಆಯಾಯ ರಾಜ್ಯಗಳಲ್ಲಿಅಲ್ಲಿನ ಭೂಸುಧಾರಣಾ ಕಾನೂನಿನಲ್ಲಿರುವ ರಂಧ್ರಗಳನ್ನು ಮುಚ್ಚುವ ರೀತಿಯಲ್ಲಿ ತಿದ್ದು ಪಡಿಗಳನ್ನು ಸೂಚಿಸಿ ವಿಶಾಲ ಪ್ರಚಾರ ಕೊಟ್ಟು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಬೇಕು.

ಈ ಬೇಡಿಕೆ ರಾಜ್ಯ ಸರ್ಕಾರಗಳನ್ನು ಒತ್ತಾಯಿಸಿ ಕಣ್ಣು ತೆರೆಸಿ ತಿದ್ದುಪಡಿಗಳನ್ನು ಮುಂತರುವಂತೆ ಒತ್ತಾಯಿಸುವ ಬೇಡಿಕೆಯಾಗಿದೆ.

ಎರಡನೆಯ ಬೇಡಿಕೆ ಗೇಣಿದಾರ, ಸಾಲುದಾರರೈತರ ರಕ್ಷಣೆಯಾಗಬೇಕು. ಅವರ ಹಕ್ಕುಗಳ ಕುರಿತು ರಿಕಾರ್ಡು ತಯಾರಾಗಬೇಕು ಎಂಬಬೇಡಿಕೆಯಾಗಿದೆ. ದೇಶದಾದ್ಯಂತ ಒಂದಲ್ಲ ಒಂದು ರೀತಿಯಲ್ಲಿ ಕಾನೂನುಇದ್ದೂ ಕಾನೂನು ಮೀರಿಯೇ ಲಕ್ಷ ಲಕ್ಷ ಸಂಖ್ಯೆಯಲ್ಲಿ ಬಡ ರೈತರು ಭೂ ಮಾಲಕರ ಶೋಷಣೆ, ದಬ್ಬಾಳಿಕೆಗೆ ಒಳಗಾಗಿರುವುದು ಕಟು ಸತ್ಯ, ಈ ಕೋಟ್ಯಾಂತರ ಬಡ ರೈತರ ರಕ್ಷಣೆಯಾಗಬೇಕಾದರೆ ಪ.ಬಂಗಾಳ, ಕೇರಳ ಮತ್ತು ತ್ರಿಪುರದಲ್ಲಿ ಜಾರಿಗೆ ಬಂದ ಕಟ್ಟು ನಿಟ್ಟಿನ ಕಾನೂನುಗಳ ರೀತ್ಯ ದೇಶದಾದ್ಯಂತ ಕಾನೂನುಗಳು ಜಾರಿಗೆ ಬರಬೇಕು. ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ವಿಶೇಷವಾಗಿ ಇಂದು ಈ ವಿಭಾಗಗಳ ರೈತರಿಗೆ ಏನೇನೂ ರಕ್ಷಣೆ ಇಲ್ಲದಂತಾಗಿದೆ. ಕೇಂದ್ರ ಸರ್ಕಾರವು ಆಗಾಗ್ಗೆ ಔಪಚಾರಿಕವಾಗಿ ಎಂಬಂತೆ ರಾಜ್ಯ ಸರ್ಕಾರಗಳನ್ನು ಈ ಬಗ್ಗೆ ನೆನಪು ಮಾಡುತ್ತದೆ, ವಿನಹ, ಕಟ್ಟುನಿಟ್ಟಾಗಿ ರಕ್ಷಣೆ ಸಿಗುವಂತೆ ಮಾಡಲು ಏನೂ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ, ಈ ಪರಿಸ್ಥಿತಿ ಬದಲಾಗಬೇಕು.

ಕೃಷಿ ಕೂಲಿಗಾರರಿಗೆ ಅಖಿಲ ಭಾರತ ಕಾನೂನು

ಮೂರನೇಯ ಬೇಡಿಕೆ. ಕೃಷಿ ಕೂಲಿಗಾರರಿಗೆ ನ್ಯಾಯವಾದ ಕೂಲಿ, ಮನೆ ನಿವೇಶನ, ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಕೆಲಸದ ಸ್ಥಿತಿಗತಿಗಳ ಸುಧಾರಣೆ, ರಕ್ಷಣೆ ಇತ್ಯಾದಿ ಒದಗಿಸುವ ಕೇಂದ್ರ ಕಾನೂನು ಜಾರಿಯಾಗಬೇಕೆಂಬ ಬೇಡಿಕೆ.

ಕೃಷಿ ಕೂಲಿಗಾರರಿಗೆ ಕೇರಳದ ಎಡ ಪ್ರಜಾಪ್ರಭುತ್ವ ಸರ್ಕಾರವು 1968 ರಲ್ಲಿ ಮುಂತಂದ ಕೃಷಿ ಕೂಲಿಗಾರರ ಹಿತ ರಕ್ಷಣಾ ಕಾನೂನಿನ ಆಧಾರದಲ್ಲಿ ಕೇಂದ್ರ ಸರ್ಕಾರವು ಇಡೀ ದೇಶದಲ್ಲಿ ಶೇಕಡಾ 40 ರಷ್ಟು (ಕೆಲವು ರಾಜ್ಯದಲ್ಲಿ ಇನ್ನೂ ಜಾಸ್ತಿ) ಇರುವ ಕೃಷಿ ಕೂಲಿಗಾರರಿಗೆ ಸಮಗ್ರ ಕಾನೂನನ್ನು ರೂಪೀಕರಿಸಿ ಜಾರಿ ಮಾಡಬೇಕೆಂಬುದೇ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುವ ಬೇಡಿಕೆ.

ದೇಶದಲ್ಲಿ ವರ್ಷ ವರ್ಷ ಅಧಿಕವಾಗುತ್ತಿರುವ ಮತ್ತು ಗ್ರಾಮಾಂತರದಲ್ಲಿ ದೇಶದ ಕಾರ್ಮಿಕ ವರ್ಗದ ಕ್ರಾಂತಿಕಾರಿ ಬಂಧುವಾಗಿರುವ ಈ ಕೃಷಿಕೂಲಿಗಾರರ ವಿಭಾಗದ ಅತಿ ಪ್ರಮುಖ ಮತ್ತು ತುರ್ತಿನ ಬೇಡಿಕೆ ಇದು. ಗ್ರಾಮಾಂತರದ ಸ್ಥಾಪಿತ ಹಿತಾಸಕ್ತಿಗಳು, ಭೂಮಾಲಿಕ ಹಿತಗಳು "ಕೆಲವೊಮ್ಮೆ ರೈತರ ಬೇಡಿಕೆಗಳಿಗೆ ನೇತೃತ್ವ ಕೊಡುವ ವ್ಯಕ್ತಿಗಳು" ವಿರೋಧ ಮಾಡುವ ಈ ಬೇಡಿಕೆಗಳಿಗೆ ದೇಶದ ಪ್ರಗತಿಯ ದೃಷ್ಟಿಯಲ್ಲಿ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ಇದೆ. ಅಖಿಲ ಭಾರತ ಕಿಸಾನ್ ಸಭಾ, ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಈ ಪ್ರಮುಖ ಬೇಡಿಕೆಯನ್ನು ಬಲವಾಗಿ ಬೆಂಬಲಿಸುತ್ತದೆ.

ಬೆಂಬಲಿತ ಬೆಲೆ

ಇನ್ನೂ ರೈತರ ಬೆಳೆಗಳಿಗೆ ನ್ಯಾಯವಾದ ಬೆಂಬಲಿತ ಬೆಲೆಗಳನ್ನು ಬೆಳೆಗಳು ಹೊಲದಲ್ಲಿ ಬೆಳೆಯುತ್ತಿರುವಾಗಲೇ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸಬೇಕು ಮತ್ತು ಕೊಯ್ಲಿನ ವೇಳೆ ಸರಕಾರಿ ಏಜೆನ್ಸಿಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಹಣವನ್ನು ಹೂಡಿ ಬೆಳೆಗಳನ್ನು ರೈತರಿಂದ ಸಂಗ್ರಹಿಸಬೇಕೆಂಬುದೇ ಈ ಬೇಡಿಕೆ. ಈ ಬೇಡಿಕೆ ಎಲ್ಲಾ ವಿಭಾಗಗಳ ರೈತರ ಭದ್ರತೆಯನ್ನು ಸಾಧಿಸುವ ಬೇಡಿಕೆಯಾಗಿದೆ. ಇಂದು ರೈತರು ಬೆಳೆದ ಬೆಳೆಗಳ ಸಂಪೂರ್ಣ ಪ್ರಯೋಜನ ಮಧ್ಯವರ್ತಿ ವ್ಯಾಪಾರಸ್ಥರಿಗೂ, ಬಂಡವಾಳಶಾಹಿಗಳಿಗೂ ಹೋಗುತ್ತಿದೆ. ಈ ಪರಿಸ್ಥಿತಿ ತೀವ್ರವಾಗಿ ಶೀಘ್ರವಾಗಿ ಬದಲಾಗಬೇಕು.

ದೇಶದಲ್ಲಿ ಕೃಷಿ ಅಭಿವೃದ್ಧಿಗೆಮಾತ್ರ ಈ ಬೇಡಿಕೆ ಸಾಧಕವಾಗುವುದಿಲ್ಲ. ಕೈಗಾರಿಕಾಅಭಿವೃದ್ಧಿಗೂ ಆ ಮೂಲಕ ದೇಶದ ಅಭಿವೃದ್ಧಿಗೂ ಈ ಬೇಡಿಕೆಯ ಮಾನ್ಯತೆ ಸಾಧಕವಾಗುವುದು. ಆದಕಾರಣ ಅಖಿಲಭಾರತ ಕಿಸಾನ್ ಸಭೆಯು ಈ ಬೇಡಿಕೆಗೆ ಅತ್ಯಂತ ಮಹತ್ವವನ್ನು ಕೊಡುತ್ತದೆ.

ಈ ಬೇಡಿಕೆಯ ಜೊತೆಯಲ್ಲಿ ಆಯಾಯ ರಾಜ್ಯಗಳು-ಕರ್ನಾಟಕದಲ್ಲಿ ನಿಮ್ಮ ರಾಜ್ಯಕ್ಕೆ ವಿಶೇಷವಾದ ರೈತರಿಗೆ ಭಾದಿಸುವ, ಸಮಸ್ಯೆಗಳ ಪರಿಹಾರದ ಆಧಾರದಲ್ಲಿ ಬೇಡಿಕೆಗಳನ್ನು ಮುಂದಿಟ್ಟು ನೀವು ಸೆಪ್ಟೆಂಬರ್ 7-13 ರ ಚಳುವಳಿ ಮತ್ತು ಹೋರಾಟಕ್ಕೆ ಬೇಡಿಕೆ ಪಟ್ಟಿಯನ್ನು ತಯಾರಿಸಬೇಕು.

> "ಹಲವಾರು ವರ್ಷಗಳ ನಂತರ ಎಐಕೆಎಸ್ ನೇತೃತ್ವದಲ್ಲಿ ಅಖಿಲ ಭಾರತ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದನ್ನು ಯಶಸ್ವಿ ಮಾಡುವುದು ನಮ್ಮ ಕಾರ್ಯಭಾರ" ಎನ್ನುತ್ತಾರೆ ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಕಾ|| ಶಂಕರಯ್ಯ.

ವಿವಿಧ ರಾಜ್ಯಗಳಲ್ಲಿ

"ನಾವು ಅಖಿಲ ಭಾರತ ಕಿಸಾನ್ ಸಭಾ ಕೇಂದ್ರದಿಂದ ಎಲ್ಲಾ ರಾಜ್ಯ ಸಮಿತಿಗಳಿಗೆ ಹೋಗಿ ಅವರ ಸಭೆಗಳಲ್ಲಿ ಭಾಗವಹಿಸಿ ಪಡೆದ ಅನುಭವದ ಆಧಾರದಲ್ಲಿ ಸೆಪ್ಟೆಂಬರ್ 7-13ರ ಹೋರಾಟಕ್ಕೆ ಅವಶ್ಯಕವಾದ ನಿರ್ದೇಶನಗಳನ್ನಷ್ಟು ಕೊಡಲಿದ್ದೇವೆ."

ಬೇರೆ ಬೇರೆ ರಾಜ್ಯಗಳಲ್ಲಿ ತಯಾರಿ ಕೆಲಸ ಭರದಿಂದ ಸಾಗುತ್ತಿದೆ. ಅಲ್ಲಲ್ಲಿನ ಸ್ಥಿತಿಗತಿ ಮತ್ತು ಪರಂಪರೆಗನುಸಾರವಾಗಿ ಸಂಘಟನಾ ಸ್ಥಿತಿಯನ್ನು ಗಮನದಲ್ಲಿಟ್ಟು ಆಯಾಯ ರಾಜ್ಯಗಳುಕ್ರಮಗಳನ್ನು ಕೈಗೊಳ್ಳುತ್ತಿವೆ. ಉದಾಹರಣೆಗಾಗಿ, ತಮಿಳುನಾಡು ರೈತ ಸಂಘವು ರಾಜ್ಯ ಮಟ್ಟದಲ್ಲಿ ಸಭೆ ಸೇರಿದ ನಂತರ, ಎಲ್ಲಾ ಜಿಲ್ಲಾ ಸಮಿತಿಗಳನ್ನು ಸೇರಿಸಿ ಈ ಸೆಪ್ಟೆಂಬರ್ 7-13ರ ಚಳುವಳಿಯ ಮಹತ್ವವನ್ನು ವಿವರಿಸಲು ತೀರ್ಮಾನಿಸಿದ್ದಾರೆ. ಅನಂತರ ಎಲ್ಲ ಜಿಲ್ಲಾ, ತಾಲ್ಲೂಕು, ಇತ್ಯಾದಿ-ವಿಸ್ತೃತವಾಗಿ ರೈತರ ಸಭೆಗಳನ್ನು ಕರೆದು ಚಳುವಳಿಯ ವಿವರಗಳನ್ನು ಚರ್ಚಿಸಲಿದ್ದಾರೆ.

ಇವುಗಳಲ್ಲಿ ರೈತರ ಸಭೆಗಳನ್ನು ಕರೆದು ಅವರೊಡನೆ ಈ ಹೋರಾಟದ ಕುರಿತು ಚರ್ಚಿಸಿ ಯೋಜನೆ ಹಾಕುವುದು ಎರಡನೆಯ ಘಟ್ಟದ ಕಾರ್ಯಕ್ರಮವಾಗಿ ಅವರು ಅಂಗೀಕರಿಸಿದ್ದಾರೆ.

ಅನಂತರ ಮೂರನೇ ಹಂತವಾಗಿ ನೂರಾರು ಪ್ರದೇಶಗಳಲ್ಲಿ, ಸಾರ್ವಜನಿಕ ಸಭೆಗಳನ್ನು ನಡೆಸಲು ಅವರು ಕಾರ್ಯಕ್ರಮ ಹಾಕಿದ್ದಾರೆ. ಈ ಸಭೆಗಳಲ್ಲಿ ಪ್ರಮುಖ ಭಾಷಣಕಾರರನ್ನು ಟಿ.ಯು. ಮತ್ತಿತರ ಕ್ಷೇತ್ರಗಳಲ್ಲಿ ದುಡಿಯುವ ಮುಂದಾಳುಗಳ ಸಹಾಯವನ್ನು ಪಡೆಯಲಾಗುತ್ತದೆ. ಆ ಸಭೆಗಳಲ್ಲಿ ಸರ್ವ ಸಾಮಾನ್ಯ ಬೇಡಿಕೆಗಳಲ್ಲದೆ, ಆಯಾಯ ಪ್ರದೇಶಗಳಲ್ಲಿ ಜನರನ್ನು ಭಾದಿಸುವ ಸಮಸ್ಯೆಗಳನ್ನು ಎತ್ತಿ ತೋರಿಸಿ ಅವುಗಳ ತುರ್ತು ಪರಿಹಾರಕ್ಕಾಗಿ ಹೋರಾಟದ ಆವಶ್ಯಕತೆಯನ್ನು ಒತ್ತಿ ಹೇಳಲಾಗುವುದು. ಈ ರೀತಿ ನಿರ್ದಿಷ್ಟ ಪ್ರಶ್ನೆಗಳನ್ನು ಸಂಘಟಿಸಿ ರೈತರನ್ನು ಎಬ್ಬಿಸಿ ಅವರು ದೊಡ್ಡ ಪ್ರಮಾಣದಲ್ಲಿ ಈ ಚಳುವಳಿಯಲ್ಲಿ ಭಾಗಿಗಳಾಗುವಂತೆ ಮಾಡುವುದು ಅದರ ಉದ್ದೇಶವಾಗಿದೆ.

ಕೊನೆಯ ಹತ್ತು ದಿನಗಳಲ್ಲಿ ಎಲ್ಲಾ ಪ್ರದೇಶಗಳಲ್ಲೂ ತೀವ್ರವಾಗಿ ಪಾದಯಾತ್ರೆ ಕಾರ್ಯಕ್ರಮಗಳನ್ನು ಸಂಘಟಿಸಲಾಗುವುದು ಆದಷ್ಟು ಹೆಚ್ಚು ಗ್ರಾಮ ಪ್ರದೇಶಗಳನ್ನ ಸಂಪರ್ಕಿಸಲಾಗುವುದು.

ಪಿಕೆಟಿಂಗ್‌ನಲ್ಲಿ ಭಾಗವಹಿಸುವ ರೈತ ಸ್ವಯಂ ಸೇವಕರ ಪಟ್ಟಿಗಳನ್ನೂ ಮಾಡಲಾಗುವುದು. ಆ ಸ್ವಯಂ ಸೇವಕರ ತಂಡಗಳು ಎಲ್ಲಿ ಯಾವ ಆಫೀಸುಗಳ ಎದುರು-ರಾಜ್ಯಸರ್ಕಾರದ ಯಾವ ತಾರೀಖಿನಂದು ಪಿಕೆಟಿಂಗ್ ಮಾಡುವುದು ಎಂದು ನಿರ್ಧರಿಸಲಾಗುವುದು.

ಸ್ವಯಂ ಸೇವಕರ ತಂಡಗಳಿಗೆ ತಾವು ಯಾವ ಉದ್ದೇಶಕ್ಕಾಗಿ ಪಿಕೆಟಿಂಗ್ ಮಾಡುವುದು ಎಂಬುದರ ಕುರಿತು ಸ್ಪಷ್ಟವಾಗಿ ನಿರ್ದೇಶನ ಕೊಟ್ಟು ಶಿಸ್ತಿನಿಂದ ವರ್ತಿಸಲು ತರಬೇತಿ ಕೊಡಲಾಗುವುದು.

ಅಖಿಲ ಭಾರತ ಕಿಸಾನ್ ಸಭಾ ಹಾಗೂ ಅಖಿಲ ಭಾರತ ಕೃಷಿಕೂಲಿಗಾರರ ಸಂಘಟನೆ ಜೊತೆ ಸೇರಿ ಹೋರಾಟವನ್ನು ಸ್ವತಂತ್ರ ನೆಲೆಯಲ್ಲಿ ಸಂಘಟಿಸುವುದು, ಅನಂತರ ಮುಂದಿನ ಹಂತದಲ್ಲಿ ಇತರ ರೈತರ ಸಂಘಟನೆಗಳ ಜೊತೆ ಸೇರಿ ಸಂಯುಕ್ತ ಕಾರ್ಯಕ್ರಮ ಹಾಕಲು ಮುಂದಾಗುವುದು.

[7ನೇ ಪುಟ ನೋಡಿ]

ವಿದ್ಯುತ್‌ದರ, ಹಾಲಿನದರ, ಹೋಟೇಲ್ ತಿಂಡಿಗಳ

ಬೆಲೆ ಏರಿಕೆ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ

ಬೆಂಗಳೂರು

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಕರೆಯಂತೆ ಜುಲೈ 17ರಂದು ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಆಶ್ರಯದಲ್ಲಿ ನೂರಾರು ಮಂದಿ ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತಾ ಬೆಂಗಳೂರಿನ ಕೆ.ಇ.ಬಿ. ಕಾವೇರಿ ಭವನ ಕಛೇರಿಯ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಿದರು. ಧರಣಿಯಲ್ಲಿ ಸಿ. ಪಿ. ಐ. ಪಕ್ಷ ಪಾಲ್ಗೊಂಡಿರಲಿಲ್ಲ. ಧರಣಿಯನ್ನುದ್ದೇಶಿಸಿ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಕಾ॥ಎಸ್. ಸೂರ್ಯನಾರಾಯಣರಾವ್ ಹಾಗೂ ಕಾ॥ ಎಸ್. ಆರ್. ಆರಾಧ್ಯರವರುಗಳು ಮಾತನಾಡಿದರು. ಕೆ.ಇ.ಬಿ.ಯ ಅದಕ್ಷತೆ, ಭ್ರಷ್ಟಾಚಾರ, ಹಾಗೂ ಐ. ಎಂ. ಎಫ್. ಸಾಲದ ಹೊರೆಯನ್ನು ಜನಸಾಮಾನ್ಯರ ಮೇಲೆ ಹೊರಿಸುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನ ವಿರೋಧಿ ಕ್ರಮದ ವಿರುದ್ಧ ರಾಜ್ಯದ ಜನತೆ ಹಾಗೂ ಕಾರ್ಮಿಕ ವರ್ಗ ಅವಿರತ ಹೋರಾಟ ನಡೆಸಲು ಹಾಗೂ ಆಗಸ್ಟ್‌ನಲ್ಲಿ ನಡೆವ 'ಕರ್ನಾಟಕ ಬಂದ್' ಯಶಸ್ವಿಗೊಳಿಸಲು ಕರೆ ನೀಡಿದರು.

ತುಮಕೂರು

ನಗರದ ಪ್ರಮುಖ ಬೀದಿಗಳಲ್ಲಿ ಸುಮಾರು 200 ಜನರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಕೆ.ಇ.ಬಿ. ಕಚೇರಿಗೆ ತೆರಳಿದರು ಈ ಮೆರವಣಿಗೆಯಲ್ಲಿ ಹಲವು ಮಹಿಳೆಯರು ಸಹ ಭಾಗವಹಿಸಿದ್ದರು. ಕೆ. ಆರ್. ನಾಯಕ್, ಹೆಚ್.ಸಿ. ಚನ್ನಪ್ಪ, ಟಿ.ಕೆ. ಗೋವಿಂದರಾಜು ಟಿ.ಆರ್. ರೇವಣ್ಣ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ವಿದ್ಯುತ್ ಕಚೇರಿಯ ಮುಂದೆ ಪ್ರತಿಭಟನಾಕಾರರನ್ನು ಉದ್ದೇಶಿಸಿ ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಎಚ್.ಸಿ.ಚನ್ನಪ್ಪ ಸಿ.ಪಿ.ಐ.ನ ಎನ್ ಶಿವಣ್ಣ, ಪ್ರಾಂತ ರೈತ ಸಂಘದ ಗೋವಿಂದರಾಜು ಮಾತನಾಡಿ ಜನತಾ ಸರ್ಕಾರದ ಜನ ವಿರೋಧಿ ನೀತಿಗಳನ್ನು ಟೀಕಿಸಿದರು.

ಜಿಲ್ಲಾ ವಿದ್ಯುತ್ ಕಚೇರಿಯ ಮುಂದೆ ಬೆಳಗ್ಗೆಯಿಂದ ಸಂಜೆಯವರೆಗೆ ಧರಣಿ ಸತ್ಯಾಗ್ರಹ ನಡೆಸಲಾಯಿತು. ವಿದ್ಯುತ್ ಸಚಿವ ಲಕ್ಷ್ಮೀನರಸಿಂಹಯ್ಯ ಅವರು ತುಮಕೂರಿನ ನಿವಾಸದ ಮುಂದೆ ಘೋಷಣೆಗಳನ್ನು ಕೂಗಿ ಪ್ರತಿ ಭಟನೆ ವ್ಯಕ್ತಪಡಿಸಿದರು.

(ತುಮಕೂರು ವಾರ್ತೆ)

ಕೊಡಗು

ರಾಜ್ಯ ಸರ್ಕಾರ ವಿದ್ಯುತ್ ಹಾಗೂ ಹಾಲಿನ ದರ ಏರಿಸಿದುದರ ವಿರುದ್ಧ ಪ್ರತಿಭಟಿಸಿ ಸಿ.ಪಿ.ಐ. (ಎಂ) ಮತ್ತು ಸಿ.ಪಿ.ಐ. ಕಾರ್ಯಕರ್ತರು ಇಲ್ಲಿನ ಉಪ ವಿಭಾಗೀಯ ವಿದ್ಯುತ್ ಕಚೇರಿಯ ಮುಂಭಾಗದಲ್ಲಿ ಒಂದು ಗಂಟೆ ಕಾಲ ಧರಣಿ ಮುಷ್ಕರ ನಡೆಸಿದರು.

ಧರಣಿ ಕೂರುವುದಕ್ಕೆ ಮೊದಲು ಎರಡೂ ಪಕ್ಷಗಳ ಸುಮಾರು 150 ಕ್ಕೂ ಹೆಚ್ಚು ಕಾರ್ಯಕರ್ತರು ಇಲ್ಲಿನ ಗಾಂಧಿ ಮಂಟಪದಿಂದ ಮೆರವಣಿಗೆ ಹೊರಟು ಗೌಳಿ ಬೀದಿ, ಹಿಲ್‌ರಸ್ತೆ, ಮಹದೇವ ಪೇಟೆ ಹಾಗೂ ಖಾಸಗಿ ಬಸ್ ನಿಲ್ದಾಣದ ರಸ್ತೆಯ ಮೂಲಕ ವಿದ್ಯುತ್ ಕಚೇರಿ ಮುಂಭಾಗದಲ್ಲಿ ಸಭೆ ಸೇರಿದರು.

ಪಕ್ಷದ ಕಾರ್ಯ ಕರ್ತರನ್ನುದ್ದೇಶಿಸಿ ಪ್ರಮೋದ್ ರಸ್ತೆ ತಡೆ ಚಳುವಳಿಯನ್ನೂ ಹಮ್ಮಿಕೊಳ್ಳುವ ಬಗ್ಗೆ ಮಾತನಾಡಿದರು. ಮೆರವಣಿಗೆಯ ನೇತೃತ್ವವನ್ನು ಸಿ.ಪಿ.ಐ(ಎಂ)ನಪ್ರಮೋದ್ ಸಿ.ಪಿ ಐ.ನ ಅಯ್ಯಪ್ಪ, ನಾಣಯ್ಯ ವಹಿಸಿದ್ದರು.

("ಶಕ್ತಿ"ಯ ವರದಿ)

ಗುಲ್ಬರ್ಗಾ

ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಎರಡೂ ಕಮ್ಯೂನಿಸ್ಟ್ ಪಕ್ಷಗಳು ವಿದ್ಯುತ್ ಸೋರಿಕೆ, ವಿದ್ಯುತ್ ಕಳ್ಳತನ, ದುಂದು ವೆಚ್ಚ ತಪ್ಪಿಸಲು ಸಾಧ್ಯವಾಗದೆ ವರ್ಲ್ಡ್‌ಬ್ಯಾಂಕ್ ಆದೇಶದ ಪ್ರಕಾರ ವಿದ್ಯುತ್ ದರ ಹೆಚ್ಚಿಸಿರುವುದನ್ನು ಖಂಡಿಸಿದವು.

ಬಹಿರಂಗ ಸಭೆಗೂ ಮುಂಚೆಟೌನ್ ಹಾಲಿನಿಂದ ಸ್ಟೇಷನ್ ಬಜಾರ್‌ವರೆಗೆ ನಡೆದು ಕೆ.ಇ.ಬಿ. ಕಚೇರಿಯ ಮುಂದೆ ಧರಣಿ ನಡೆಲಾಯಿತು. ನಂತರದ ಸಭೆಯನ್ನು ಉದ್ದೇಶಿಸಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಲ್ಲಪ್ಪ ಕರಣಗಿ, ಜಿಲ್ಲಾ ಪರಿಷತ್ ಸದಸ್ಯ ಮಾರುತಿ ಮಾನ್ಪಡೆ ಅಡೆಪ್ಪಾ ಮಾತನಾಡಿದರು. ಈ ಮೆರವಣಿಗೆಯಲ್ಲಿ ಸಿ.ಐ.ಟಿ.ಯು, ರೈತ ಸಂಘ, ಎ.ಐ.ಟಿ.ಯು.ಸಿ. ಎ-ಐ.ಎಸ್.ಎಫ್. ಭಾಗವಹಿಸಿದ್ದವು.

("ಸತ್ಯಕಾಮ" ವರದಿ)

ರಾಯಚೂರು

ರಾಜ್ಯದಲ್ಲಿ ವಿದ್ಯುತ್ ಹಾಲಿನದರವನ್ನು ಹೆಚ್ಚಿಸಿದ್ದನ್ನು ಸಿಪಿಐ (ಎಂ) ಮತ್ತು ಸಿ.ಪಿ.ಐ, ಕರೆಯಮೇರೆಗೆ ನಗರದಲ್ಲಿ ಇಂದು ಪ್ರತಿಭಟನೆಯನ್ನು ವ್ಯಕ್ತಪಡಿಸಲಾಯಿತು.

ಈ ಬಗ್ಗೆ ಸಿ.ಪಿ ಐ. [ಎಂ] ಪಕ್ಷದ ಜಿಲ್ಲಾ ಸಮಿತಿ ಜಿಲ್ಲಾಧಿಕಾರಿಗಳಿಗೆ ಮನವಿಪತ್ರ ಸಲ್ಲಿಸಿತು. ಬರುವ ಆಗಸ್ಟ್ 2 ರಂದು ಬಂದ್ ಆಚರಿಸಲು ನಿರ್ಧರಿಸಲಾಯಿತು. ಇದಕ್ಕೂಮುಂಚೆ ಜಿಲ್ಲಾಧಿಕಾರಿಗಳ ಕಚೇರಿಗೆ ಮೆರವಣಿಗೆಯುಲ್ಲಿ ತೆರಳಿದರು. ನಂತರದ ಬಹಿರಂಗ ಸಭೆಯನ್ನು ಉದ್ದೇಶಿಸಿ ಸಿ. ಪಿ. ಐ (ಎಂ) ಜಿಲ್ಲಾ ಕಾರ್ಯದರ್ಶಿ ಚಂದಶೇಖರಬಾಳೆ ನಗರಸಭಾ ಸದಸ್ಯೆ ಕಾ॥ ಹರಿಣಿ ಕಕ್ಕೇರಿ, ಪುರುಷೋತ್ತಮ, ಕಲಾಲ್‌ಬಂಡಿ, ಮಾತನಾಡಿದರು.

(ರಾಯಚೂರು ವಾಣಿ)

ಹುಬ್ಬಳ್ಳಿ

ಜನತಾ ಸರಕಾರದ ಜನವಿರೋಧಿ ಕ್ರಮಗಳಿಗೆ ಪ್ರತಿಭಟನೆ ವ್ಯಕ್ತಪಡಿಸಲು ಎರಡೂ ಕಮ್ಯುನಿಸ್ಟ್ ಪಕ್ಷಗಳ ಕಾರ್ಯಕರ್ತರು ಪ್ರದರ್ಶನ ನಡೆಸಿದರು. ವಿದ್ಯುತ್‌ದರ ಹೆಚ್ಚಿಸಿರುವುದಕ್ಕೆ ಪ್ರತಿಭಟನೆ ನಡೆಸಲು ಎರಡೂ ಪಕ್ಷಗಳ ಕಾರ್ಯಕರ್ತರು ಮೆರವಣಿಗೆಯಲ್ಲಿ ತೆರಳಿ ಕೆ.ಇ.ಬಿ. ಕಚೇರಿಯ ಮುಂದೆ ಧರಣಿ ನಡೆಸಿದರು. ಆನಂತರದ ಸಭೆಯಲ್ಲಿ ಕಾರ್ಮಿಕ ನಾಯಕರು ಸಭೆಯನ್ನುದ್ದೇಶಿಸಿ ಮಾತನಾಡಿದರು.

(ಕನ್ನಡಪ್ರಭ ವರದಿ)

ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕೆ.ಇ.ಬಿ. ಕಛೇರಿ ಜಿಲ್ಲಾಧಿಕಾರಿಗಳು ಕಛೇರಿ ಮುಂದೆ ವಿದ್ಯುತ್ ದರ, ಹಾಲಿನ ದರ ಹೋಟೆಲ್ ತಿಂಡಿ ಇತ್ಯಾದಿಗಳ ದರ ಏರಿಕೆಯ ವಿರುದ್ಧ ಪ್ರತಿಭಟಿಸಬೇಕೆಂಬ ಸಿ.ಪಿ.ಐ.(ಎಂ) ರಾಜ್ಯ ಸಮಿತಿ, ಹಾಗೂ ಸಿ.ಪಿ.ಐ. ರಾಜ್ಯ ಮಂಡಳಿಗಳ ಕರೆಗೆ ಉತ್ಸಾಹ ಪೂರ್ಣ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಧಾರವಾಡ :

ಸಿ.ಪಿ.ಐ (ಎಂ) ಮತ್ತು ಸಿ.ಪಿ.ಐ. ಗಳ ಜಂಟಿಕರೆಯನ್ನು ಬೆಂಬಲಿಸಿ ಎಸ್. ಎಫ್.ಐ.ನ ಧಾರವಾಡ ನಗರ ಸಮಿತಿ ಶಾಲಾ ಕಾಲೇಜುಗಳ ಬಂದ್‌ನಡೆಸಿತು. ಸುಮಾರು 1200 ವಿದ್ಯಾರ್ಥಿಗಳು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ಜಿಲ್ಲಾಧಿಕಾರಿಗಳ ಕಛೇರಿಯ ಎದುರು ಪ್ರದರ್ಶನ ನಡೆಸಿ ಬೇಡಿಕೆಗಳ ಮನವಿ ಪತ್ರವನ್ನು ಅರ್ಪಿಸಲಾಯಿತು. ಸಭೆಯನ್ನುದ್ದೇಶಿಸಿ ಎಸ್.ಎಫ್.ಐ. ಮುಖಂಡರಾದ ಕಾ॥ ಸಾದಿಕ್‌ಸೌದಾಗರ್ ಮತ್ತು ಮೋಹನ ರಾಯ ರೆಡ್ಡಿ ಮಾತನಾಡಿ ರಾಜ್ಯ ಸರ್ಕಾರದ ಬೆಲೆಯೇರಿಕೆ ನೀತಿಯನ್ನು ಖಂಡಿಸಿದರು.

ಬಿಜಾಪುರ :

ಸಿ.ಪಿ.ಐ.(ಎಂ)ನ ಬಿಜಾಪುರ ಶಾಖೆಯು ರೈತಸಂಘದ ಕಾರ್ಯಾಲಯದಿಂದ ಬೃಹತ್ ಮೆರವಣಿಗೆಯನ್ನು ಏರ್ಪಡಿಸಿತ್ತು. ಮೆರವಣಿಗೆಗೆ ಮೊದಲು ತಹಸೀಲ್ದಾರ್ ಕಛೇರಿಯ ಎದುರು ಬಹಿರಂಗ ಸಭೆ ನಡೆಯಿತು. ಜಿಲ್ಲಾ ರೈತ ಸಂಘದ ಅಧ್ಯಕ್ಷರಾದ ಕಾ॥ ಭೀಮಸಿ ಕಲಾದಗಿ ಸಭೆಯನ್ನುದ್ದೇಶಿಸಿ ಮಾತನಾಡಿ ಏರಿಸಿರುವ ವಿದ್ಯುತ್‌ದರ,ಹಾಲಿನ ದರಗಳನ್ನು ಕೂಡಲೇ ಇಳಿಸಬೇಕೆಂದು ಸರ್ಕಾರವನ್ನು ಆಗ್ರಹ ಪಡಿಸಿದರು. ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ ಯುವಜನರಿಂದ ಕೂಡಿದ ಬೃಹತ್‌ಮೆರವಣಿಗೆಯ ನೇತೃತ್ವವನ್ನು ಕಾ॥ ಅಣ್ಣಾರಾಯ ಈಳಗೇರ,ಮನ್ನೂಸಾಬ ಕಲಾದಗಿ, ಸದಾನಂದ ಮೋದಿ. ಎ.ಆರ್. ಕೊಡಗಿ, ಬಸವಂತಪ್ಪ ಕಲ್ಲೊಳ್ಳಿ, ಮಳಸಿದ್ಧ ನಾಯಕವಾಡಿ ಎನ್.ಎಲ್. ನದಾಫ, ಶ್ರೀಧರ ಕುಲಕರ್ಣಿ, ಭೀಮಾಶಂಕರ ನಿಮಂಗರೆ ಮುಂತಾದವರು ವಹಿಸಿದ್ದರು.

ದಾಂಡೇಲಿ

ದಾಂಡೇಲಿಯ ಪೇಪರ್ ಮಿಲ್ ಹಾಗೂ ಪ್ಲೈವುಡ್ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಕೆ. ಇ. ಬಿ. ಆಫೀಸ್ ಮತ್ತು ಹಾಲಿನ ಡೇರಿಯ ಎದುರಿಗೆ ಪಿಕೆಟಿಂಗ್ ನಡೆಸಲಾಯಿತು. ನಂತರ ನಡೆದ ಸಭೆಯನ್ನುದ್ದೇಶಿಸಿ ಕಾ। ಹರೀಶ್‌ನಾಯಕ್ ಮತ್ತು ಕಾ॥ ಉಮೇಶ್‌ನಾಯಕ್ ಮಾತನಾಡಿದರು. ಕೆ. ಇ. ಬಿ. ಯ ಮುಖ್ಯ ಎಂಜಿನಿಯರ್‌ಗೆ ಮನವಿ ಪತ್ರ ಸಲ್ಲಿಸಿ ಸರ್ಕಾರಕ್ಕೆ ಕಳಿಸುವಂತೆ ಕೋರಲಾಯಿತು.

ಚಿಕ್ಕಮಗಳೂರು

ಸಿ.ಐ.ಟಿ.ಯು. ಮತ್ತು ಎ.ಐ.ಟಿ.ಯು.ಸಿ. ಕಾರ್ಯಕರ್ತರು ಕೆ.ಇ.ಬಿ. ಕಛೇರಿಯೆದುರು ಪ್ರದರ್ಶನ ನಡೆಸಿದರು. ಪ್ರದರ್ಶನಕ್ಕೆ ಮೊದಲು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆದು ಅದರ ನಾಯಕತ್ವವನ್ನು ಕಾ॥ ವಿ. ಸುಕುಮಾರ್ ಮತ್ತು ಕಾ॥ ಜಿ. ಎಸ್. ರಾಘವೇಂದ್ರ ವಹಿಸಿದ್ದರು. ನಂತರ ನಡೆದ ಸಭೆಯಲ್ಲಿ ಸಿ.ಐ.ಟಿ.ಯು.ನ ಕಾ॥ ವಿ. ಸುಕುಮಾರ್‌ಮತ್ತು ಸಿ.ಪಿ.ಐ.ನ ಕಾ॥ ಬಿ.ಕೆ. ಸುಂದರೇಶ್ ಮಾತನಾಡಿದರು.

ಕಡೂರು

ಸಿ.ಪಿ.ಐ.(ಎಂ)ನ ಕಾ॥ ಎ.ಕೆ.ವಿಶ್ವನಾಥ್‌ರವರ ನೇತೃತ್ವದಲ್ಲಿ ನೂರಾರು ಹಂಚಿನ ಕಾರ್ಮಿಕರು ಕಡೂರಿನ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ನಂತರ ಕೆ.ಇ.ಬಿ. ಕಛೇರಿಯೆದುರು ಮತ ಪ್ರದರ್ಶನ ನಡೆಸಿದರು. ನಂತರ ತಹಸೀಲ್ದಾರ್‌ರವರ ಮೂಲಕ ಮನವಿ ಪತ್ರವನ್ನು ಸರ್ಕಾರಕ್ಕೆ ಅರ್ಪಿಸಲಾಯಿತು.

ಸಕಲೇಶ ಪುರ

ಸಿ.ಐ.ಟಿ.ಯು.ವಿನ ದೋಜ ಅವರ ಮುಖಂಡತ್ವದಲ್ಲಿ ಕೆ.ಇ.ಬಿ. ಕಛೇರಿಯೆದುರು ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಅರೇ ಹಳ್ಳಿ ಮತ್ತು ಯಸಳೂರಿನಲ್ಲಿ ಕಾ॥ ಕೆ. ಕೃಷ್ಣ ಮತ್ತು ಕಾ॥ ವಿ. ಕೃಷ್ಣಮೂರ್ತಿ ನೇತೃತ್ವದಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದ ಬಗ್ಗೆ ವರದಿಯಾಗಿದೆ.

ಮೈಸೂರು

ಸಿ.ಪಿ ಐ.(ಎಂ) ಮತ್ತು ಸಿ.ಪಿ.ಐ. ಸಂಯುಕ್ತವಾಗಿ ಕೆ.ಇ.ಬಿ. ಕಛೇರಿಯೆದುರು ಧರಣಿ ಸತ್ಯಾಗ್ರಹ ನಡೆಸಿದವು ನಂತರ ನಡೆದ ಸಭೆಯಲ್ಲಿ ಸಿ.ಪಿ.ಐ. (ಎಂ)ನ ಕಾ॥ ಉಗ್ರಪ್ಪ ಮತ್ತು ಸಿ. ಪಿ.ಐ.ನ ಕಾ॥ ವೆಂಕಟರಾಮಯ್ಯ ಮಾತನಾಡಿ ವಿದ್ಯುತ್ ಮತ್ತು ಹಾಲಿನ ಬೆಲೆಯನ್ನು ಕೂಡಲೇ ಇಳಿಸಬೇಕೆಂದು ಒತ್ತಾಯಿಸಿದರು.

ಭದ್ರಾವತಿ

ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಜಂಟಿಯಾಗಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿತು. ನಂತರ ಕೆ.ಇ.ಬಿ. ಕಛೇರಿಯೆದುರು ಧರಣಿ ಮುಷ್ಕರ ನಡೆಸಲಾಯಿತು. ಸಿ.ಪಿ.ಐ. (ಎಂ)ನ ಕಾ॥ ರಂಗೇಗೌಡ,ಸಿ.ಪಿ.ಐ.ನ ಕಾ॥ ಎಂ.ಎಸ್. ಕೃಷ್ಣನ್ ಮತ್ತು ಕಾ॥ ಡಿ.ಸಿ. ಮಾಯಣ್ಣ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮೂಡಿಗೆರೆ

ಸಿ ಪಿ.ಐ.(ಎಂ) ಮತ್ತು ಸಿ.ಪಿ.ಐ. ಕಾರ್ಯಕರ್ತರು ಕೆ.ಇ.ಬಿ. ಕಛೇರಿಯೆದುರು ಧರಣಿ ಸತ್ಯಾಗ್ರಹ ನಡೆಸಿದರು. ಸಿ.ಪಿ.ಐ.(ಎಂ)ನ ಕಾ। ಎಸ್. ಪಿ. ಪ್ರಕಾಶ್, ಕಾ॥ ಎ.ಸಿ. ಕೇಶವ ಮತ್ತು ಸಿ.ಪಿ.ಐ.ನ ಕಾ॥ ಬಿ.ಕೆ. ಲಕ್ಷ್ಮಣ ಕುಮಾರ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕೆ.ಜಿ.ಎಫ್.

200 ಜನರು ರಾಬರ್ಟ್‌ಸನ್ ಪೇಟೆ ಕಛೇರಿಯಿಂದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟು ಘೋಷಣೆಗಳನ್ನು ಕೂಗುತ್ತಾ ಉರಿಗಾಂ ರೈಲ್ವೆ ಸ್ಟೇಷನ್ ಬಳಿಸಿ ಕೆ.ಇ.ಬಿ. ಕಛೇರಿಯ ಬಳಿಧರಣಿ ಸತ್ಯಾಗ್ರಹ ಹೂಡಿದರು ಟಿ. ಎಸ್ ಮಣಿ ಎಂ.ಎಲ್.ಎ., ಶೌರಿದಾಸ್, ಜಯರಾಂ, ಅಶ್ವತ ನಾರಾಯಣ್ ಇವರು ಮಾತನಾಡಿ ತಕ್ಷಣವೇ ವಿದ್ಯುತ್‌ದರ ಇಳಿಸಬೇಕೆಂದು ಒತ್ತಾಯ ಮಾಡಿದರು.

○

ಸಾದರ ಸ್ವೀಕಾರ

ಎಡ ಚಿಂತನೆಯ ಓದುಗರು ಓದ ಬೇಕಾದ ಕೆಲವು ಪುಸ್ತಕಗಳ ಕನ್ನಡ ಅನುವಾದಗಳು ಪ್ರಕಟವಾಗಿವೆ.

1. ಜಗತ್ತನ್ನು ತಲ್ಲಣಗೊಳಿಸಿದ ಹತ್ತು ದಿನಗಳು-ಜಾನ್ ರೀಡ್ ನವ ಕರ್ನಾಟಕ ಪ್ರಕಾಶನ. ಬೆಲೆ 30-00 ರೂ
2. ರಷ್ಯನ್ ಇತಿಹಾಸದಿಂದ ಕಥೆಗಳು-ಎಸ್ ಅಲೆಕ್ಸಿಯೇವ್ ರಾದುಗ ಪ್ರಕಾಶದ ಬೆಲೆ 18-00
3. ಮಾರ್ಕ್ಸ್ ಹಾಗೂ ಎಂಗೆಲ್ಸರ "ಕಮ್ಯೂನಿಸ್ಟ್ ಪ್ರಣಾಳಿಕೆ ಕುರಿತು" -ವಿ.ವಿ. ಸರ್ಜೀನೋವ್ ಪ್ರಗತಿಪ್ರಕಾಶನ ಬೆಲೆ ನಮೂದಿಲ್ಲ
4. ರಾಜಕೀಯ ಪಾರಿಭಾಷಿಕ ಪದಕೋಶ-ಬೋರಿಸ್ ಪುತ್ರಿನ್ ನವಕರ್ನಾಟಕ ಪ್ರಕಾಶನ, ಬೆಲೆ 12-00
5. ಮಾರ್ಕ್ಸ್‌ವಾದ ಮತ್ತು ಭಗವದ್ಗೀತೆ-ಎಸ್.ಜಿ.ಸರ್.ದೇಸಾಯಿ ಹಾಗೂ ದಿಲೀಪ್ ಬೋಸ್ ನವಕರ್ನಾಟಕ ಪ್ರಕಾಶನ ಬೆಲೆ-10-00

ಕಾರ್ಮಿಕರ ಹಕ್ಕುಗಳ ಹಾಗೂ ವೇತನದ ಮೇಲೆ ದಾಳಿ

ಇದನ್ನು ಹಿಮ್ಮೆಟ್ಟಿಸಲು ಆಗಸ್ಟ್ 3 ರಂದು ಅಖಿಲ ಭಾರತ ಸತ್ಯಾಗ್ರಹವನ್ನು ಯಶಸ್ವಿಗೊಳಿಸಿರಿ

– ಸಿ. ನಂಜುಂಡಪ್ಪ

ಕಾಂಗ್ರೆಸ್ ಸರ್ಕಾರವು ಕಾರ್ಮಿಕ ಸಂಘಗಳ ಕಾಯಿದೆ (ಟ್ರೇಡ್ ಯೂನಿಯನ್ ಆಕ್ಟ್) ಮತ್ತು ಕೈಗಾರಿಕಾ ವಿವಾದಗಳ ಕಾಯಿದೆ (ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಆಕ್ಟ್)ಗಳನ್ನು ತಿದ್ದುಪಡಿ ಮಾಡಿ ಅನೇಕ ಕಾರ್ಮಿಕ ಸಂಘಟನೆಗಳಿರುವುದರಿಂದ ಆಗುತ್ತಿರುವ ಅನಾಹುತವನ್ನು ಕೈಗಾರಿಕಾ ಅಶಾಂತಿಯನ್ನು ನಿವಾರಿಸುವುದಾಗಿ ಕಳೆದ ವರ್ಷದಿಂದ ಹೇಳುತ್ತಾ ಬಂದಿದೆ. ಭಾರತ ಸರ್ಕಾರದ ಕಾರ್ಮಿಕ ಸಚಿವಾಲಯವು ತಿದ್ದುಪಡಿಗಳನ್ನು ಪೂರ್ಣಗೊಳಿಸಿ ಸಮಗ್ರ ಮಸೂದೆಯನ್ನು ಕ್ಯಾಬಿನೆಟ್ಟಿಗೆ (ಸಚಿವ ಸಂಪುಟಕ್ಕೆ) ಒಪ್ಪಿಗೆಗಾಗಿ ಕಳುಹಿಸಿರುವುದಾಗಿಯೂ ಸಂಸತ್ತಿನ ಮುಂದಿನ ಅಧಿವೇಶನದಲ್ಲಿ ಮಂಡಿಸಿರುವುದಾಗಿಯೂ ಕೇಂದ್ರ ಕಾರ್ಮಿಕ ಸಚಿವ ಪಿ. ಎ. ಸಂಗ್ಮಾ ಇತ್ತೀಚೆಗೆ ಹೇಳಿದ್ದಾರೆ.

ಈ ತಿದ್ದುಪಡಿಗಳು ಕಾರ್ಮಿಕ ಸಂಘಗಳ ಚಟುವಟಿಕೆಗಳ ಮೇಲೆ, ಕಾರ್ಮಿಕರ ಮೇಲೆ ಯಾವ ಪರಿಣಾಮವನ್ನು ಮಾಡುತ್ತವೆ ಎಂಬುದನ್ನು ವಿಚಾರ ಮಾಡಬೇಕು.

ಸಾಮ್ರಾಜ್ಯಶಾಹಿಗಳ ನಿಯಂತ್ರಣದಲ್ಲಿರುವ ವಿಶ್ವಬ್ಯಾಂಕ್ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ(ಐ.ಎಂ.ಎಫ್.)ಗಳ ಒತ್ತಡಕ್ಕೆ ಬಾಗಿ ರಾಜೀವ್‌ಗಾಂಧಿ ಸರ್ಕಾರವು 1985ರ ಬಜೆಟ್ ಮುಖಾಂತರ ಪ್ರಾರಂಭಿಸಿ ಅನುಸರಿಸುತ್ತಾ ಬಂದಿರುವ ಹೊಸ ಆರ್ಥಿಕ ನೀತಿಯು ನಮ್ಮ ದೇಶದಲ್ಲಿ ಆರ್ಥಿಕ ಬಿಕ್ಕಟ್ಟನ್ನು ತೀವ್ರಗೊಳಿಸಿದೆ. ಆಳುವ ವರ್ಗಗಳ ಸರ್ಕಾರವು ಬಿಕ್ಕಟ್ಟಿನ ಹೊರೆಯನ್ನು ಜನ ಸಾಮಾನ್ಯರ ಮೇಲೆ ಕಾರ್ಮಿಕ ವರ್ಗದ ಮೇಲೆ ಹೊರಿಸುತ್ತಿದೆ. ಕಾರ್ಖಾನೆಗಳು ಒಂದು ಕಡೆಯಿಂದ ರೋಗ ಗ್ರಸ್ತವಾಗಿ ಮುಚ್ಚಿ ಹೋಗುತ್ತಿವೆ. ಇಂದು ಒಂದು ಲಕ್ಷ ಮೂವತ್ತೊಂಬತ್ತು ಸಾವಿರ ಸಣ್ಣ, ಮಧ್ಯಮ, ದೊಡ್ಡ ಕಾರ್ಖಾನೆಗಳು ಮುಚ್ಚಿಹೋಗಿ ಅವುಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಮುಚ್ಚಿ ಹೋಗಿರುವ ಮೈಸೂರಿನ ಕೃಷ್ಣರಾಜೇಂದ್ರ ಮಿಲ್ಸ್, ಬೆಂಗಳೂರಿನ ಹೊರವಲಯದಲ್ಲಿರುವ ಅಲೆಂಬಿಕ್ ಗಾಜಿನ ಕಾರ್ಖಾನೆ, ಕೆಲವು ಹತ್ತಿ ಗಿರಣಿಗಳು, ಸಕ್ಕರೆ ಕಾರ್ಖಾನೆಗಳು, ಅನೇಕ ಸಣ್ಣ ಘಟಕಗಳು ಕರ್ನಾಟಕದಲ್ಲಿಯೇ ಇವೆ. ರಾಜೀವ್‌ಗಾಂಧಿಯವರು ವಿಶೇಷವಾಗಿ ಹೆಚ್ಚಿಸುತ್ತಿರುವ ಗಣಕೀಕರಣ(ಕಂಪ್ಯೂಟರೀಕರಣ), ಸ್ವಯಂಚಾಲೀಕರಣಗಳು, ಕೇಂದ್ರ ಸರ್ಕಾರ ಅನುಸರಿಸುತ್ತಿರುವ 'ಖಾಲಿ ಹುದ್ದೆಗಳನ್ನು ತುಂಬುವುದರ ಮೇಲೆ ನಿಷೇಧ' ಬ್ಯಾನ್ ಆನ್ ರಿಕ್ರೂಟ್‌ಮೆಂಟ್) ನೀತಿಯು ಉದ್ಯೋಗಾವಕಾಶವನ್ನು ತೀವ್ರವಾಗಿ ಕಡಿತ ಮಾಡಿವೆ. ದೇಶದಲ್ಲಿ ಹತ್ತು ಕೋಟಿಗಿಂತಲೂ ಹೆಚ್ಚು ನಿರುದ್ಯೋಗಿಗಳಿದ್ದು, ಅರ್ಧಕ್ಕಿಂತಲೂ ಹೆಚ್ಚು ಜನ ಬಡತನದ ರೇಖೆಗಿಂತಲೂ ಕೆಳಗೆ ಜೀವಿಸುತ್ತಿದ್ದು ಬರಗಾಲ ಪೀಡಿತ ಒರಿಸ್ಸಾದಕಾಲಾಹಂಡಿಯಂತಹ ಪ್ರದೇಶಗಳಲ್ಲಿ ಕಾಂಗ್ರೆ ಆಡಳಿತವಿರುವ ರಾಜ್ಯಗಳಲ್ಲಿ ಜನರು ಹೊಟ್ಟೆಗಿಲ್ಲದೆ ಸಾಯುತ್ತಿದ್ದು, (ಎಂದರೆ ಹೊಟ್ಟೆತುಂಬ ಊಟ ಮಾಡಲು ಸಾಧ್ಯವಿಲ್ಲದಿದ್ದು) ಪರಿಸ್ಥಿತಿ ಚಿಂತಾಜನಕವಾಗಿದೆ.

ಜನಸಾಮಾನ್ಯರ ಮೇಲೆ ತೆರಿಗೆಗಳ ಏರಿಕೆ, ದೊಡ್ಡ ಬಂಡವಾಳಗಾರರಿಗೆ ತೆರಿಗೆ ರಿಯಾಯಿತಿ, ಕೊರತೆ ಹಣಕಾಸುಗಳ ಪರಿಣಾಮವಾಗಿ ಹಣದುಬ್ಬರ ಹೆಚ್ಚಿ ಬೆಲೆಗಳು ಹಿಂದೆಂದೂ ಕಾಣದ ರೀತಿಯಲ್ಲಿ ವಿಪರೀತವಾಗಿ ಏರುತ್ತವೆ. ಕಾರ್ಮಿಕ-ನೌಕರರ, ದುಡಿಯುವ ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿ ಜೀವನ ಮಟ್ಟ ಕೆಳಗೆ ಇಳಿಯುತ್ತಿದೆ. ರೈತರ ಸಂಕಷ್ಟಗಳು ಹೆಚ್ಚಿವೆ. ಸಾರ್ವಜನಿಕ ಕ್ಷೇತ್ರದ ಖಾಸಗೀಕರಣ ಪ್ರಯತ್ನಗಳು ನಡೆಯುತ್ತಿವೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ದೇಶವನ್ನು ಕೊಳ್ಳೆಹೊಡೆಯಲು ಅವಕಾಶ ಮಾಡಿ ಕೊಡಲಾಗಿದೆ.

ಸಾಮ್ರಾಜ್ಯ ಶಾಹಿ ಪ್ರೇರಿತ ವಿಭಜನಕಾರಿ ಶಕ್ತಿಗಳು ದೇಶದಲ್ಲಿ ಅಸ್ಥಿರತೆಯನ್ನುಂಟುಮಾಡಲು, ಧಾರ್ಮಿಕ ಮೂಲಭೂತವಾದಿಗಳನ್ನು ಉಪಯೋಗಿಸಿ ಪ್ರಜಾಪ್ರಭುತ್ವ ಚಳುವಳಿಯ ಐಕ್ಯತೆಯನ್ನು ಕಾರ್ಮಿಕ ಸಂಘಗಳ ಐಕ್ಯತೆಯನ್ನು ಒಡೆಯುವ ಕೆಲಸ ನಡೆಯುತ್ತಿದೆ.

ಈ ಸಂಕೀರ್ಣ ಪರಿಸ್ಥಿತಿಯಲ್ಲಿ ಕಾರ್ಮಿಕರ, ದುಡಿಯುವ ಜನರ ಜೀವನಮಟ್ಟದ ರಕ್ಷಣೆಗಾಗಿ, ಸಾರ್ವಜನಿಕ ಕ್ಷೇತ್ರದ ಅವಹೇಳನದ ಹಾಗೂ ಖಾಸಗೀಕರಣದ ವಿರುದ್ಧವಾಗಿ, ವಿಭಜನಕಾರಿ ಶಕ್ತಿಗಳ ವಿರುದ್ಧ ದೇಶದ ಐಕ್ಯತೆ ಮತ್ತು ಸಮಗ್ರತೆಗಳ ರಕ್ಷಣೆಗಾಗಿ ನಮ್ಮ ದೇಶದಲ್ಲಿ ವ್ಯಾಪಕವಾದ ಪ್ರಚಂಡ ಆಂದೋಳನಗಳು ನಡೆಯಬೇಕಾಗಿದೆ. ಕಾರ್ಮಿಕ ವರ್ಗದ ವರ್ಗ ಸಂಘಟನೆಗಳಾದ ಕಾರ್ಮಿಕ ಸಂಘಟನೆಗಳು ಕಾರ್ಮಿಕರ ದೈನಂದಿನ ಸಮಸ್ಯೆಗಳಿಗಾಗಿ ಹೋರಾಡುವುದರ ಜತೆಯಲ್ಲೇ ಮೇಲಿನ ವಿಚಾರಗಳಿಗಾಗಿ ಐಕ್ಯ ಹೋರಾಟಗಳನ್ನು ನಡೆಸುತ್ತಾ ಆಂದೋಳನಗಳನ್ನು ಮುನ್ನಡೆಸಬೇಕಾಗಿದೆ. ಈ ಸಂದರ್ಭದಲ್ಲಿ ಜನವರಿ 21ರಂದು ನಡೆದ ಸಾರ್ವಜನಿಕ ಕ್ಷೇತ್ರ ಕಾರ್ಮಿಕರ ಚಾರಿತ್ರಿಕವಾದ ಅಖಿಲ ಭಾರತ ಮುಷ್ಕರವನ್ನು ಸ್ಮರಿಸಬೇಕು.

ಇದರಿಂದಾಗಿ ಕಾಂಗ್ರೆಸ್ ಸರ್ಕಾರವು ಕಾರ್ಮಿಕರ, ಕಾರ್ಮಿಕ ಸಂಘಗಳ ಹೋರಾಟ ಮಾಡುವ ಹಕ್ಕನ್ನು, ಮುಷ್ಕರದ ಹಕ್ಕನ್ನು ಕಸಿದುಕೊಳ್ಳಲು, ಟ್ರೇಡ್‌ಯೂನಿಯನ್‌ನ ಹಕ್ಕುಗಳನ್ನು ಮೊಟಕು ಮಾಡಲು ಕಾರ್ಮಿಕ ಸಂಘಗಳ ಕಾಯಿದೆ ಮತ್ತು ಕೈಗಾರಿಕಾ ವಿವಾದಗಳ ಕಾಯಿದೆಗಳಿಗೆ ತಿದ್ದುಪಡಿಗಳನ್ನು ಮಾಡಲು ಹೊರಟಿದೆ.

ಕಾಂಗ್ರೆಸ್ ಸರ್ಕಾರವು ತರುವ ತಿದ್ದುಪಡಿಗಳಿಂದ ಕಾರ್ಮಿಕರ ಸಂಘಟನಾ ಹಕ್ಕು, ಸಾಮೂಹಿಕ ಚೌಕಾಶಿಯ ಹಕ್ಕು, ಮುಷ್ಕರದ ಹಕ್ಕುಮತ್ತು ಇತರ ಹಕ್ಕುಗಳು ಇಲ್ಲವಾಗುತ್ತವೆ. ಈಗ ಇರುವ ಕಾಯಿದೆಯ ಪ್ರಕಾರ ಏಳು ಜನರು ಸೇರಿ,- ನಾಲ್ಕಾರು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವವರು, ಮೂವರು ಹೊರಗಿನವರು– ಒಂದು ಕಾರ್ಮಿಕ ಸಂಘವನ್ನು ನೊಂದಾಯಿಸಬಹುದು (ರಿಜಿಸ್ಟರ್ ಮಾಡಬಹುದು). ತಿದ್ದುಪಡಿಯ ಪ್ರಕಾರ ಒಂದು ಕಾರ್ಖಾನೆ ಅಥವಾ ಕೈಗಾರಿಕಾ ಘಟಕದಲ್ಲಿರುವ ಒಟ್ಟು ಕೆಲಸಗಾರರ ಶೇ.25 ರಷ್ಟು ಮಂದಿ ಒಂದಾದರೆ ಮಾತ್ರ ಒಂದು ಹೊಸ ಕಾರ್ಮಿಕ ಸಂಘವನ್ನು ನೊಂದಾಯಿಸಬಹುದು. ಕಾರ್ಮಿಕ ಸಂಘಗಳಿಲ್ಲದ ಎಷ್ಟೋ ಕೈಗಾರಿಕಾ ಘಟಕಗಳು ನಮ್ಮಲ್ಲಿವೆ. ಅಲ್ಲಿರುವ ಕಾರ್ಮಿಕರಲ್ಲಿ ಕಾಲು ಭಾಗ ಒಂದಾಗುವ ತನಕ ಮಾಲೀಕರು ಸುಮ್ಮನಿರುತ್ತಾರೆಯೇ?ಎಂದರೆ ಹೊಸ ಕಾರ್ಮಿಕ ಸಂಘಗಳನ್ನು ರಚಿಸುವಂತೆ ಇಲ್ಲ. ಒಂದು ವೇಳೆ ರಚಿಸುವುದಾದರೆ ಬಂಡವಾಳಗಾರರ ಕೃಪಾಪೋಷಿತ ಐ. ಎನ್. ಟಿ. ಯು. ಸಿ. ಸಂಘಗಳನ್ನು ಮಾತ್ರ ರಚಿಸಲು ಸಾಧ್ಯ. ಹೀಗೆ ರಾಜೀವ್‌ಗಾಂಧಿಯವರ ಕಾಂಗ್ರೆಸ್ ಸರ್ಕಾರ ತರುವ ತಿದ್ದುಪಡಿಗಳ ಪೈಕಿ ಒಂದು ತಿದ್ದುಪಡಿಯು ಕಾರ್ಮಿಕರ ಸಂಘಟನಾ ಹಕ್ಕನ್ನು ಕಸಿದುಕೊಳ್ಳುತ್ತದೆ.

ಆಗಸ್ಟ್ ಮೂರರಂದು ಭಾರತದ ಕಾರ್ಮಿಕವರ್ಗ ಗುತ್ತೇದಾರಿ ಬಂಡವಾಳ ಶಾಹಿಗಳ ನೇತೃತ್ವದ ಆಳುವ ವರ್ಗವನ್ನು ಮುಖಾ ಮುಖಿಯಾಗಿ ಎದುರಿಸುವ ಸಿದ್ಧತೆ ನಡೆಸಿದೆ ಪ್ರಾಣತೆತ್ತು ಗಳಿಸಿದ ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಳ್ಳಲು ಅವಕಾಶ ಕೊಡುವುದಿಲ್ಲ ಎಂಬ ಸವಾಲೆಸೆಯಲಿದೆ.

ಟ್ರೇಡ್ ಯೂನಿಯನ್ ಆಕ್ಟಿಗೆ ತರಲಿರುವ ಇನ್ನೊಂದು ತಿದ್ದುಪಡಿಯು ಕಾರ್ಮಿಕ ಸಂಘಗಳಲ್ಲಿ ಹೊರಗಿನವರು ಇರುವುದರ ಮೇಲೆ ನಿರ್ಬಂಧವನ್ನು ಹೇರುತ್ತದೆ. ಹೊರಗಿನವರು ಎಂದರೆ ಯಾರು ? ಇಂದು ಅದೇ ಕಾರ್ಖಾನೆಯಲ್ಲಿ ಕೆಲಸದಲ್ಲಿದ್ದು ಮಾಲೀಕರುನಾಳೆ ಅವರನ್ನು ಕೆಲಸದಿಂದ ವಜಾ ಮಾಡಿದರೆ ಅವರು ಹೊರಗಿನವರಾಗುತ್ತಾರೆ. ಕಾರ್ಮಿಕ ಸಂಘದ ಚಟುವಟಿಗಗಳನ್ನು ನಡೆಸಿಕೊಂಡು ಹೋಗಲು ಸಾಮಾನ್ಯವಾಗಿ ಎಲ್ಲಾ ಕಡೆಯೂ ಪೂರ್ಣಕಾಲದ ಕಾರ್ಯಕರ್ತರ ಅವಶ್ಯಕತೆ ಇದೆ. ಒಂದು ಕಾರ್ಖಾನೆಯಲ್ಲಿ ಕೆಲಸಮಾಡುತ್ತಿರುವ ಕಾರ್ಮಿಕರು ತಮ್ಮ ಕಾರ್ಮಿಕ ಸಂಘದ ಪೂರ್ಣಾವಧಿ ಕಾರ್ಯಕರ್ತರಾಗಬೇಕಾಗುತ್ತದೆ. ತಿದ್ದುಪಡಿಯು ಇದರ ಮೇಲೆ ನಿರ್ಬಂಧವನ್ನು ಹೇರುತ್ತದೆ. ಕಾರ್ಮಿಕ ಸಂಘದ ಪದಾಧಿಕಾರಿಗಳು ಆಯಾ ಕೈಗಾರಿಕಾಘಟಕದಲ್ಲಿ ಕೆಲಸ ಮಾಡುವವರೇ ಆಗಿದ್ದು, ಅವರು ಎಲ್ಲಾ ಕಾರ್ಮಿಕರ ಹಿತದೃಷ್ಟಿಯಿಂದ ಮಾಲೀಕರವಿರುದ್ಧವಾಗಿ ವರ್ತಿಸಿದಾಗ ಅವರನ್ನು ಮಾಲೀಕರು ಕೆಲಸದಿಂದ ವಜಾಮಾಡುತ್ತಾರೆ. ಇಲ್ಲವೇ ತಮ್ಮ ಬುಟ್ಟಿಗೆ ಹಾಕಿಕೊಳ್ಳಲು ಪ್ರಯತ್ನಿಸುತ್ತಾರೆ, ಕಾರ್ಮಿಕ ಸಂಘದ ಚಟುವಟಿಕೆ ನಡೆಸಲು ಸ್ವಲ್ಪ ವಿದ್ಯಾಭ್ಯಾಸ, ಸ್ವಲ್ಪ ಕಾನೂನು ಜ್ಞಾನಬೇಕು. ಕೋಟಿಗಟ್ಟಲೆ ಇರುವ ಅಸಂಘಟಿತ ಕಾರ್ಮಿಕರು, ಕೃಷಿ ಕೂಲಿಗಾರರು ಬಹುತೇಕ ಅನಕ್ಷರಸ್ತರು,ಅವರು ತಾವಾಗಿಯೇ ಸಂಘಟಿತರಾಗುವುದು, ಕಾರ್ಮಿಕ ಸಂಘವನ್ನು ನಡೆಸುವುದು ಹೇಗೆ? ಹೊರಗಿನವರು ಅವರ ಸಂಘಟನೆಗೆ ಹೋಗುವಂತಿಲ್ಲ ಅವರ ಶೋಷಣೆ, ಅವರ ಮೇಲೆ ದಬ್ಬಾಳಿಕೆ ಸತತವಾಗಿ ನಡೆಯುತ್ತಿರಬೇಕು! ನೋಡಿ, ಹೇಗಿದೆ ಈ ತಿದ್ದುಪಡಿಯ ಚಮತ್ಕಾರ!

ಕೈಗಾರಿಕಾ ವಿವಾದಗಳ ಕಾಯಿದೆಗೆ ತರುವ ಒಂದು ತಿದ್ದುಪಡಿಯು ಕೈಗಾರಿಕಾ ವಿವಾದಗಳನ್ನುಶೀಘ್ರವಾಗಿ ವಿಲೇವಾರಿ ಮಾಡುವ ಹೆಸರಿನಲ್ಲಿ ಒಂದು "ಕೈಗಾರಿಕಾ ಬಾಂಧವ್ಯಗಳ ಆಯೋಗ" (ಇಂಡಸ್ಟ್ರಿಯಲ್ ರಿಲೇಷನ್ಸ್ ಕಮಿಷನ್)ವನ್ನು ಸೃಷ್ಟಿಸುತ್ತದೆ. ಇದರ ಅಧ್ಯಕ್ಷ ಒಬ್ಬ ಹಿರಿಯ ನ್ಯಾಯಾಧೀಶ. ಈ ಆಯೋಗವು ಒಂದು ನ್ಯಾಯಾಲಯದಂತೆ ಕೆಲಸ ಮಾಡುತ್ತದೆ. ಕೈಗಾರಿಕಾ ವಿವಾದಗಳ ಇತ್ಯರ್ಥವು ನ್ಯಾಯಾಲಯಗಳಲ್ಲಿ ವಿಪರೀತ ವಿಳಂಬವಾಗುತ್ತದೆ. 1980ರ ಸೆಪ್ಟಂಬರ್‌ನಲ್ಲಿ ಕುದುರೆ ಮುಖದ ಎಚ್.ಎಸ್.ಸಿ.ಎಲ್.ನಲ್ಲಿ ಆಡಳಿತ ಮಂಡಳಿಯು ಮಾಡಿದ ಸಾಮೂಹಿಕ ರಿಟ್ರೆಂಚ್‌ಮೆಂಟಿನ ಪರಿಣಾಮವಾಗಿ ಉದ್ಭವಿಸಿದ ಕೈಗಾರಿಕಾ ವಿವಾದವು ಇಂದು ಏಳು ವರ್ಷಗಳ ನಂತರ ಸರ್ವೋಚ್ಚನ್ಯಾಯಾಲಯದಲ್ಲಿ (ಸುಪ್ರೀಂ ಕೋರ್ಟಿನಲ್ಲಿ) ಇದೆ. ಏಳು ವರ್ಷಗಳ ಕಾಲ ಆ 239 ಕಾರ್ಮಿಕರು ಹೇಗೆ ಬದುಕಬೇಕು? ಬೊಕ್ಕೈಕಾನ್ ಎಸ್ಟೇಟಿನಲ್ಲಿ 1974ರಲ್ಲಿ ಉದ್ಭವಿಸಿದ ಒಂದು ಕೈಗಾರಿಕಾ ವಿವಾದವು ಇನ್ನೂ ನ್ಯಾಯಾಲಯದಲ್ಲಿದೆ. ಇವು ಎರಡು ಉದಾಹರಣೆಗಳಷ್ಟೇ, ಇಂತಹ ಅನೇಕ ಕೇಸುಗಳಿವೆ ಈ ಕೈಗಾರಿಕಾ ಬಾಂಧವ್ಯಗಳ ಆಯೋಗವು ಮುಷ್ಕರ ಮುರುಕನಾಗಿ ಕೆಲಸಮಾಡುತ್ತದೆ.

ಕಾರ್ಮಿಕರು ಒಗ್ಗಟ್ಟಾಗಿ ತಮ್ಮ ಬೇಡಿಕೆಗಳನ್ನು ಪಡೆದುಕೊಳ್ಳಲು ಐಕ್ಯ ಹೋರಾಟವನ್ನು ನಡೆಸಿ ಮುಷ್ಕರ ಮಾಡಿ ಉತ್ಪಾದನೆ ನಿಂತು ತಮಗೆ ನಷ್ಟವಾಗುತ್ತದೆ ಎಂಬ ಅರಿವುಂಟಾದಾಗಲೇ ಬಂಡವಾಳಗಾರರು ಮಾತು ಕತೆಗೆ ಬರುತ್ತಾರೆ, ಒಪ್ಪಂದವಾಗಿ ಕಾರ್ಮಿಕರ ಬೇಡಿಕೆಗಳು ಈಡೇರುತ್ತವೆ ಎಂಬುದು ಜಾಗತಿಕ ಕಾರ್ಮಿಕ ಚಳುವಳಿಯ ಇತಿಹಾಸವು ಕಲಿಸುವ ಪಾಠ. ಕೈಗಾರಿಕಾ ಬಾಂಧವ್ಯಗಳ ಕಾಯಿದೆಗೆ ತರುವ ಒಂದು ತಿದ್ದುಪಡಿಯು ಕಾರ್ಮಿಕರ ಮುಷ್ಕರದ ಹಕ್ಕನ್ನು ಕಸಿಯುತ್ತದೆ. ಒಂದು ಕಾರ್ಖಾನೆಯಲ್ಲಿರುವ ಕಾರ್ಮಿಕರಲ್ಲಿ ಶೇ 76 ಮಂದಿ ಮುಷ್ಕರಕ್ಕಾಗಿ ನಡೆಯುವ ಮತದಾನದಲ್ಲಿ ಮತ ಹಾಕಿದರೆ ಮಾತ್ರ ಮುಷ್ಕರ ಮಾಡಬಹುದು. ಶೇ. 26 ಮಂದಿ (ಅಲ್ಪಸಂಖ್ಯಾತರು) ಮುಷ್ಕರವನ್ನು ವಿರೋಧಿಸಿ ಮತ ಹಾಕಿದರೆ ಮುಷ್ಕರ ಮಾಡುವಂತಿಲ್ಲ. ಹಾಗೆ ಮುಷ್ಕರ ಮಾಡಿದರೆ ಅದು ಕಾನೂನು ಬಾಹಿರವಾದ ಮುಷ್ಕರವಾಗಿ ಶಿಕ್ಷಾರ್ಹವಾಗುತ್ತದೆ. ಒಂದುವೇಳೆ ಶೇ. 76 ಅಥವಾ ಶೇ. 100 ರಷ್ಟು ಕಾರ್ಮಿಕರೇ ಮತ ಹಾಕಿ ಮುಷ್ಕರ ಮಾಡಬಹುದು ಎಂದು ತಿಳಿದಿರಬಹುದು, ಮುಷ್ಕರದ ತೀರ್ಮಾನವಾಯಿತು ಎಂಬ ಸುದ್ದಿ ತಿಳಿದ ಕೂಡಲೇ 'ಕೈಗಾರಿಕಾ ಬಾಂಧವ್ಯಗಳ ಆಯೋಗ'ವು ಕಾರ್ಮಿಕ ಸಂಘಕ್ಕೆ ನೋಟೀಸು ಕೊಟ್ಟು, ಕೈಗಾರಿಕಾ ವಿವಾದವನ್ನು ತಾನು ಪರಿಶೀಲನೆಗೆ ತೆಗೆದುಕೊಂಡಿರುವುದಾಗಿಯೂ, ಆದ್ದರಿಂದ ಮುಷ್ಕರ ಮಾಡಕೂಡದೆಂದು ಹೇಳುತ್ತದೆ. ಆಗ ಮುಷ್ಕರ ಮಾಡುವಂತಿಲ್ಲ, ಮುಷ್ಕರ ಮಾಡಿದ್ದೇ ಆದರೆ ಅದು ಕಾನೂನು ಬಾಹಿರವಾದ ಮುಷ್ಕರವಾಗಿ ಕಾರ್ಮಿಕ ಸಂಘವು ಶಿಕ್ಷೆಗೆ ಗುರಿಯಾಗುತ್ತದೆ. ಹೀಗೆ ರಾಜೀವ ಗಾಂಧಿ ಸರ್ಕಾರವು ಅನೇಕ ವರ್ಷಗಳ ಹೋರಾಟ, ತ್ಯಾಗ, ಬಲಿದಾನಗಳಿಂದ ಕಾರ್ಮಿಕ ವರ್ಗವು ಪಡೆದುಕೊಂಡಿರುವ ಮುಷ್ಕರದ ಹಕ್ಕನ್ನು ಕಸಿದು ಕೊಳ್ಳುತ್ತದೆ.

ಒಂದು ತಿದ್ದುಪಡಿಯ ಪ್ರಕಾರ ಕಾರ್ಮಿಕ ಸಂಘದ ಮನ್ನಣೆ 'ಚೆಕ್ ಆಫ್' ಮೂಲಕ ನಡೆಯುತ್ತದೆ. "ಚೆಕ್ ಆಫ್" ಪದ್ಧತಿ ಕಡ್ಡಾಯವಾಗುತ್ತದೆ. 'ಚೆಕ್ ಆಫ್' ಎಂದರೆ ಏನು ? ಕಾರ್ಮಿಕ ಸಂಘದ ಸದಸ್ಯನಾಗಬೇಕಾದರೆ ಒಬ್ಬ ಕಾರ್ಮಿಕ ಸದಸ್ಯತ್ವದ ಚಂದಾ ಹಣವನ್ನು ಸಂಘಕ್ಕೆ ಕಟ್ಟಬೇಕು. ಸಾಮಾನ್ಯವಾಗಿ ಕಾರ್ಮಿಕ ಸಂಘದ ಕಾರ್ಖಾನೆ ಸಮಿತಿ, ಪದಾಧಿಕಾರಿಗಳು, ಕಾರ್ಯಕರ್ತರು ಕಾರ್ಮಿಕರಿಂದ ಚಂದಾ ಸಂಗ್ರಹ ಮಾಡುತ್ತಾರೆ. ಕಾರ್ಮಿಕರಿಗೆ ಅವರ ಕೂಲಿಯನ್ನು ಸಂಬಳವನ್ನು ಪಾವತಿ ಮಾಡುವಾಗ ಮಾಲೀಕರು ಆಡಳಿತ ಮಂಡಳಿಯವರು ಅದ ಲ್ಲಿ ಕಾರ್ಮಿಕ ಸಂಘದ ಸದಸ್ಯತ್ವದ ಚಂದಾ ಹಣವನ್ನು ಕಡಿತಮಾಡಿ,ನೇರವಾಗಿ ಕಾರ್ಮಿಕ

[6ನೇ ಪುಟ ನೋಡಿ]

ನಮ್ಮ ಟ್ರೇಡ್ ಯೂನಿಯನ್ ಚಳುವಳಿಯಲ್ಲಿನ ಕೆಲವು ಸಂಕುಚಿತ ಪಂಥವಾದಿ ಪ್ರವೃತ್ತಿ

-ವಿ. ಜೆ. ಕೆ. ನಾಯರ್

ಕಾರ್ಮಿಕರ ವಿಶಾಲ ಐಕ್ಯತೆಗೆ ಮುಳುವಾಗುವ ಕೆಲ ಪಂಥವಾದಿ ತಪ್ಪುಗಳ ಬಗ್ಗೆ ಗಮನ ಸೆಳೆಯುತ್ತಾರೆ ಕಾ|| ವಿ. ಜೆ. ಕೆ. ಯವರು.

ಬೆಳೆಯುತ್ತಿರುವ ಟ್ರೇಡ್ ಯೂನಿಯನ್ ಚಳುವಳಿ, ನಮ್ಮ ರಾಜ್ಯದ ಚಳುವಳಿಯೂ ಸೇರಿದಂತೆ, ಹಲವಾರು ರೀತಿಯ ಸಮಸ್ಯೆಗಳನ್ನೆದುರಿಸುತ್ತಿದೆ. ಇವುಗಳಲ್ಲಿ ಕೆಲವು ಆಂತರಿಕ ಸಮಸ್ಯೆಗಳು; ಕೆಲವು ಬಾಹ್ಯ ಸಮಸ್ಯೆಗಳು. ಸಂಕುಚಿತ ಪಂಥವಾದ (sectarianism) ಇಂತಹ ಸಮಸ್ಯೆಗಳಲ್ಲೊಂದು. ಇದು ಆಂತರಿಕ ಸಮಸ್ಯೆಯಾದ ಕಾರಣತೀರಾ ವಿಚ್ಛಿದ್ರಕಾರಿ ಸ್ವರೂಪದ ಸಮಸ್ಯೆಯೂ ಆಗಿದೆ. ಹೊರನೋಟಕ್ಕೆ ಈ ಪ್ರವೃತಿ ತುಂಬಾ ಕ್ರಾಂತಿಕಾರಿಯಂತೆ ಕಾಣಿಸಿಕೊಳ್ಳುವುದರಿಂದಾಗಿ ವಾಸ್ತವವಾಗಿ ಅದು ನಮ್ಮ ಪಕ್ಷದ ಮುಂದಾಳತ್ವಕ್ಕೆ ಮತ್ತು ಸಂಘಟನೆಗೆ ಅಪಖ್ಯಾತಿ ತರುತ್ತದೆ.

ಇಂತಹ ಗಂಭೀರ ಸ್ವರೂಪದ ಮತ್ತು ತಪ್ಪಾದ ಪಂಥವಾದಿ ಧೋರಣೆಗಳು ಬೆಳೆಯಲು ಮುಖ್ಯ ಕಾರಣ ನಮ್ಮ ಚಳುವಳಿಗೆ ಸಂಬಂಧ ಪಟ್ಟಂತಹ ಅನೇಕ ವಿಚಾರಗಳ ಬಗ್ಗೆ ನಮಗೆ ಸ್ಪಷ್ಟವಾದಕಣ್ಣೋಟ ಇಲ್ಲದಿರುವುದು, ಆರ್ಥಿಕ ಮುಗ್ಗಟ್ಟಿನ ಸ್ವರೂಪ ಮತ್ತದರ ಪರಿಣಾಮಗಳ ಕುರಿತೂ ಸರಿಯಾದ ತಿಳುವಳಿಕೆ ಇಲ್ಲದಿರುವುದು, ನಮ್ಮ ಕಣ್ಣೋಟ ಮತ್ತು ಕಾರ್ಯ ತಂತ್ರಗಳ ವಿಶಾಲತೆ ಮತ್ತುಅವುಗಳ ನಿರ್ಣಾಯಕ ಸ್ವರೂಪವನ್ನು ಅರ್ಥ-ಮಾಡಿಕೊಂಡಿಲ್ಲದಿರುವುದು. ಇವುಗಳೊಂದಿಗೆ ಸಾಮಾನ್ಯ ಜ್ಞಾನದ ಕೊರತೆ, ಹಾಗೂ ವೈಯುಕ್ತಿಕವಾದಿ ಮತ್ತು ಪಂಥವಾದಿ ಕಾರ್ಯ ವಿಧಾನಗಳೂ ಇಂತಹ ಧೋರಣೆ ಬೆಳೆಯುವುದಕ್ಕೆ ದಾರಿಮಾಡಿಕೊಟ್ಟವೆ.

ಬಡವ - ಶ್ರೀಮಂತವಾದ

ನಮ್ಮಲ್ಲಿ ಕೆಲವು ಜನ ತಿಳಿದಿರುವ ಪ್ರಕಾರ ನಮಗೆ 'ಬಡವರ' ಬಗ್ಗೆ ನಿಷ್ಠೆಯಿದ್ದು ಶ್ರೀಮಂತರನ್ನು ನಾವು ವಿರೋಧಿಸಿದರೆ ಸಾಕು, ಎಂದು ನಮ್ಮಲ್ಲಿ ಕೆಲವು ಸಂಗಾತಿಗಳು ತಿಳಿದುಕೊಂಡಿದ್ದಾರೆ, ಮತ್ತು ಅದೇ ರೀತಿ ನಡೆಯುತ್ತಾರೆ. ಇಂತಹ ಭಾವನೆ ನಮ್ಮ ವರ್ಗ ಐಕ್ಯತೆಯನ್ನು ಒಡೆಯುವಂತಹ ಕೆಲಸಕ್ಕೂ ಇಳಿದು ಬಿಟ್ಟಿದೆ. ಕಾರ್ಮಿಕರೊಳಗೆಯೇ 'ಸ್ಥಿತಿವಂತರು' ಮತ್ತು 'ಬಡವರು' ಎನ್ನುವ ವರ್ಗೀಕರಣ ಮಾಡುವ ಮಟ್ಟಕ್ಕೂ ನಾವು ಇಳಿದು ಬಿಟ್ಟಿದ್ದೇವೆ. ನಮ್ಮಲ್ಲಿ ಕೆಲವರು ನಂಬಿರುವಪ್ರಕಾರ ನಮ್ಮ ಚಳುವಳಿಯಲ್ಲಿ ಸೇರಿಕೊಳ್ಳುವವರು ಬಡವರು ಮಾತ್ರ; ಹಾಗಾಗಿ ನಾವು ಎಲ್ಲಾ ರೀತಿಯ 'ಸ್ಥಿತಿವಂತ' ರನ್ನೂ ವಿರೋಧಿಸಬೇಕು! ಸ್ಥಿತಿವಂತರೆಂದರೆ ಯಾರು; ಅದನ್ನು ನಿರ್ಧರಿಸುವ ಮಾನದಂಡ ಯಾವುದು ? ಇದು ನಮ್ಮ ಬೇರೆಬೇರೆ ಸಂಗಾತಿಗಳ ದೃಷ್ಟಿಯಲ್ಲಿ ಬೇರೆ ಬೇರೆಯಾಗಿದೆ. ಹೆಚ್ಚಿನ ವೇಳೆ ಇದು ನಮ್ಮದೇ ಸಂಗಾತಿಗಳ ವೈಯುಕ್ತಿಕ ಜೀವನ ಮಟ್ಟ, ಜೀಗಿದೆ ಮತ್ತು ಅವರು ವಾಸಿಸುತ್ತಿರುವ ಪ್ರದೇಶ ಎಷ್ಟು ಹಿಂದುಳಿದಿದೆ ಎನ್ನುವುದರ ಮೇಲೂ ಅವಲಂಬಿಸಿದೆ. ಇನ್ನು ಕೆಲವರು ಇಸ್ತ್ರಿ ಮಾಡಿದ ಬಟ್ಟೆ ತೊಡುವುದು ಶ್ರೀಮಂತಿಕೆಯ ಲಕ್ಷಣ ಎನ್ನುವಷ್ಟು ಮುಗ್ಧರಾಗಿದ್ದಾರೆ. ಅವರ ಪ್ರಕಾರ ನಾವು ಎಲ್ಲಾ ಕಡೆಗೂ, ಪ್ರತಿಯೊಂದು ಕಾರ್ಖಾನೆಯೊಳಗೂ ಸಹ ಬಡವರ ಹಿತಾಸಕ್ತಿಯನ್ನು ಮಾತ್ರ ಕಾಪಾಡಬೇಕು; ಹೀಗೆ ಮಾಡುವಾಗ ಕೆಲವೊಂದು ಹೆಚ್ಚಿನ ಸವಲತ್ತುಗಳನ್ನು ಪಡೆಯುತ್ತಿರುವ ಕಾರ್ಮಿಕರಿಗೆ ಅಂತಹ ಸವಲತ್ತನ್ನು ಇಲ್ಲಗಳೆದರೂ ಪರವಾಗಿಲ್ಲ!

'ನಮ್ಮ ಕ್ರಾಂತಿ ನಡೆಯುವುದು ಶ್ರೀಮಂತರ ವಿರುದ್ಧ ಮತ್ತು ಈ ಕ್ರಾಂತಿಯನ್ನು ನಡೆಸುವವರು ಬಡವರು ಮಾತ್ರ' ಎನ್ನುವುದೇ ಈ ಯೋಚನಾ ವಿಧಾನದ ಸೈದ್ಧಾಂತಿಕ ನೆಲೆಗಟ್ಟು. ಈ ಅತೀವ ಸರಳೀಕರಣ ನಮ್ಮ ವರ್ಗ ಕಣ್ಣೋಟವನ್ನು ಮಸುಕು ಗೊಳಿಸುತ್ತದೆ; ವರ್ಗಗಳೆಂದರೆ 'ಶ್ರೀಮಂತರು' ಮತ್ತು 'ಬಡವರು' ಮಾತ್ರ ಎಂಬ ಅಣಕುವೇಷ ತೊಡಿಸುತ್ತದೆ. ಇಂತಹ ಸರಳೀಕೃತ ಅ-ವರ್ಗೀಯ (non class) ಯೋಚನಾ ವಿಧಾನ ಮಾರ್ಕ್ಸ್‌ವಾದ ಅಲ್ಲ. ಮಾರ್ಕ್ಸ್‌ವಾದವು ಕ್ರಾಂತಿಯ ಸಿದ್ಧಾಂತವನ್ನು ವೈಜ್ಞಾನಿಕ ರೀತಿಯಲ್ಲಿ ಹೀಗೆ ಶ್ರುತಪಡಿಸಿದೆ. ಸಮಾಜವು ವಿಕಾಶಗೊಳ್ಳುವ ಪ್ರಕ್ರಿಯೆಯಲ್ಲಿ ಇಂದಿನ ಆಧುನಿಕ ಸಮಾಜ ಅಂದರೆ ಬಂಡವಾಳಶಾಹಿ ಸಮಾಜ ಬೆಳೆದು ಬಂದಿದೆ. ಈ ಬಂಡವಾಳಶಾಹಿ ಸಮಾಜ ಅದಕ್ಕಿಂತಲೂ ಹಿಂದಿನ ಸಮಾಜ ವ್ಯವಸ್ಥೆಯಾದ 'ಊಳಿಗಮಾನ್ಯ' ವ್ಯವಸ್ಥೆಯ ಗರ್ಭದಿಂದ ವಿಕಾಸಹೊಂದಿ ಬಂದಿದೆ. ಉತ್ಪಾದಕ ಶಕ್ತಿಗಳು ಮತ್ತು ಉತ್ಪಾದನಾ ಸಂಬಂಧಗಳ ನಡುವಿನ ವೈರುದ್ಯ ತೀವ್ರಾನ ವಾಗುವುದೇ ಕ್ರಾಂತಿಯಾದಾಗ. ಹಳತಾಗಿ ಹೋಗಿರುವ ಉತ್ಪಾದನಾ ಸಂಬಂಧಗಳನ್ನು ಕಿತ್ತೊಗೆದು ಆ ಜಾಗದಲ್ಲಿ ಹೊಸ ಉತ್ಪಾದನಾ ಸಂಬಂಧಗಳನ್ನು ಸ್ಥಾಪಿಸಿ ಅದಕ್ಕನುಗುಣವಾಗಿ ಸಮಾಜವನ್ನು ಪುನಾರಚಿಸುವುದೇ ಕ್ರಾಂತಿ. ಈ ಮೂಲಭೂತ ಸಿದ್ಧಾಂತವನ್ನು ಸರಿಯಾಗಿ ಅರ್ಥಮಾಡಿಕೊಂಡಾಗ ನಾವು ಇನ್ನೂ ಕೆಲವು ವಿಷಯಗಳನ್ನು ಸ್ಪಷ್ಟವಾಗಿ ತಿಳಿಯಬೇಕಾಗುತ್ತದೆ. ಆಧುನಿಕ ಸಮಾಜದಲ್ಲಿ ಕಾರ್ಮಿಕವರ್ಗವು ಉತ್ಪಾದಕ ಶಕ್ತಿಗಳ ಭಾಗವಾಗಿರುತ್ತದೆ. ಉತ್ಪಾದನಾ ಸಾಧನಗಳು ತೀವ್ರಗತಿಯಲ್ಲಿ ಬೆಳೆಯುತ್ತಿರುವಾಗ ಕಾರ್ಮಿಕ ವರ್ಗವೂ ಅದರ ಜೊತೆಗೆ ತಾನೂ ಬೆಳೆಯುತ್ತದೆ. ಅದು ಸಂಖ್ಯೆಯಲ್ಲಿ ವೃದ್ಧಿಯಾಗುತ್ತಿರುವಂತೆಯೇ ಗುಣದಲ್ಲೂ ಬೆಳೆಯುತ್ತದೆ. ಇನ್ನೊಂದೆಡೆ ಈ ಪ್ರಕ್ರಿಯೆಯಿಂದಾಗಿ ಕಾರ್ಮಿಕ ವರ್ಗ ತಾನೇ ಅತೀವ ಒತ್ತಡಕ್ಕೊಳಗಾಗುತ್ತದೆ. ಇಂದಿನ ಬಂಡವಾಳಶಾಹಿ ಭೂಮಾಲಿಕ ಉತ್ಪಾದನಾ ಸಂಬಂಧಗಳು ಇನ್ನೂ ಹೆಚ್ಚಿನ ಉತ್ಪಾದನೆ ಮತ್ತು ವಿತರಣೆಯ ಬೆಳವಣಿಗೆಗೆ ಅಡ್ಡಿಯಾಗುತ್ತವೆ; ಎಂಬುದನ್ನು ಕಾರ್ಮಿಕ ವರ್ಗ ತನ್ನದೇ ವರ್ಗ ಹಿತಾಸಕ್ತಿಯಿಂದ ಕಂಡುಕೊಳ್ಳುತ್ತದೆ; ಮತ್ತು ತನ್ನದೇ ಹಿತಾದೃಷ್ಟಿಯಿಂದ ಇಂದಿನ ವ್ಯವಸ್ಥೆ ತೊಲಗಬೇಕೆಂಬ ಪ್ರಜ್ಞೆಯನ್ನೂ ಗಳಿಸಿಕೊಳ್ಳುತ್ತದೆ. ಹಾಗಾಗಿ ಈ ಹೋರಾದಲ್ಲಿ ತೊಡಗಿ ಆಮೂಲಕ ಎಲ್ಲಾ ದುಡಿಯುವ ಜನ, ಬಡವರು ಮತ್ತು ನಿರ್ಗತಿಕರು ಮುಂತಾದವರ ಹಿತಾಸಕ್ತಿಯ ರಕ್ಷಣೆಯಲ್ಲಿ ತಾನು ಮುಂದಾಳುತ್ವದ ಪಾತ್ರ ವಹಿಸುತ್ತದೆ. ಬಂಡವಾಳಶಾಹಿ ಸಂಬಂಧಗಳಿಗಿಂತಲೂ ಹಳೆಯದಾದ ಊಳಿಗಮಾನ್ಯ ಸಂಬಂಧಗಳು ಸಹ ಅಸ್ತಿತ್ವದಲ್ಲಿರುವ ನಮ್ಮ ದೇಶದಲ್ಲಿ ಈ ಊಳಿಗಮಾನ್ಯ ಸಂಬಂಧಗಳನ್ನು ನಿರ್ಮೂಲ ಮಾಡುವುದರಲ್ಲೂ ಕಾರ್ಮಿಕ ವರ್ಗ ಖಚಿತವಾಗಿ ತನ್ನ ಪ್ರಮುಖ ಪಾತ್ರ ವಹಿಸುತ್ತದೆ. ಈ ಕಾರ್ಯದಲ್ಲಿ ಮತ್ತು ಇಂತಹ ಇತರ ಕ್ರಾಂತಿ ಕಾರಿ ಕರ್ತವ್ಯದಲ್ಲಿ ಕಾರ್ಮಿಕ ವರ್ಗದ ನಿಕಟ ಮಿತ್ರನಾಗಿರುವುದು ರೈತಾಪಿ ಜನತೆ. ಹಾಗಾಗಿ ಕಾರ್ಮಿಕ ವರ್ಗ ಸಂಪೂರ್ಣ ಭೂಸುಧಾರಣೆಯನ್ನು ಜಾರಿಗೆ ತರುವಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಅವಶೇಷಗಳಾದ ಜಾತಿ, ಕೋಮುವಾದ ಮತ್ತು ಪ್ರಾದೇಶಿಕವಾದ ದಂತಹ ಅನಿಷ್ಟಗಳ ವಿರುದ್ಧ ಹೋರಾಟದಲ್ಲೂ ತನ್ನ ಪಾತ್ರವಹಿಸಬೇಕು; ಮತ್ತು ಹಾಗೆ ಮಾಡುತ್ತಿದೆ ಕೂಡಾ. ಈ ಕಾರಣಕ್ಕಾಗಿ ನಮ್ಮ ಕ್ರಾಂತಿಯ ಹಂತ ಎರಡನೇ ಹಂತವಾದ ಸಮಾಜವಾದಿ ಕ್ರಾಂತಿಯ ಹಂತವಾಗಿರದೆ, ಪ್ರಜಾಪ್ರಭುತ್ವ ಕ್ರಾಂತಿಯ ಹಂತವಾಗಿರುತ್ತದೆ. ಸಂಕುಚಿತ ಪಂಥವಾದಿಗಳ ಪಾಲಿಗೆ-ಉದಾಹರಣೆಗೆ ಟ್ರಾಟ್ಸ್‌ಕ್ಕವಾದಿಗಳಿಗೆ ಕ್ರಾಂತಿಯಲ್ಲಿರುವುದು ಒಂದೇ ಹಂತ; ಆದರೆ ಇಂತಹ ಕ್ರಾಂತಿ ಈ ಜನರ ಕನಸ್ಸುಗಳಲ್ಲಿ ಹೊರತು ಬೇರೆಲ್ಲೂ ನಡೆಯುವುದು ಅಸಾಧ್ಯ. ಈ ಜನ ಕೇವಲ ಕ್ರಾಂತಿಕಾರಿ ಘೋಷಣೆ ಹಾಕುವುದರಲ್ಲೇ ತೃಪ್ತರು. ಇದಲ್ಲದೆ ಲೆನಿನ್‌ವಾದ ಹೇಳಿರುವಂತೆ ಇಂದಿನ ಸಾಮ್ರಾಜ್ಯಶಾಹಿಯ ಯುಗದಲ್ಲಿ ಕಾರ್ಮಿಕ ವರ್ಗದ ಕ್ರಾಂತಿಯ ಜೊತೆಗೆ ರಾಷ್ಟ್ರೀಯ ವಿಮೋಚನಾ ಹೋರಾಟಗಳನ್ನೂ ಒಂದು ಗೂಡಿಸಿದರೆ ಮಾತ್ರ ಜಾಗತಿಕ ಕ್ರಾಂತಿ ನಡೆಸುವುದು ಸಾಧ್ಯ. ಈ ಅಂತರರಾಷ್ಟ್ರೀಯ ಕರ್ತವ್ಯಗಳನ್ನು ಅರ್ಥಮಾಡಿಕೊಳ್ಳುವುದು ಕಾರ್ಮಿಕ ವರ್ಗ ಒಂದೇ. ನಮ್ಮ ದೇಶದಲ್ಲೂ ಇವತ್ತು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಪಿತೂರಿಯನ್ನು ಎದುರಿಸಿ ಹೋರಾಟಕ್ಕೆ ಸಿದ್ಧವಾಗಿರುವುದೂ ಕಾರ್ಮಿಕ ವರ್ಗವೇ. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿ ಆ ಮೂಲಕ ಸಾಮ್ರಾಜ್ಯಶಾಹಿಯ ಪಿತೂರಿಯನ್ನು ಸೋಲಿಸಲು ಕಾರ್ಮಿಕ ವರ್ಗಕ್ಕೆ ಮತ್ತು ಸಾಮ್ರಾಜ್ಯಶಾಹಿಗೆ ವಿರೋಧವಾಗಿರುವ ಬಂಡವಾಳಶಾಹಿಗಳ ವಿಭಾಗಗಳನ್ನೂ ಒಳಗೊಂಡಂತೆ ಅದರ ಮಿತ್ರರಿಗೆ ಮಾತ್ರ ಸಾಧ್ಯ. ಜನತಾ ಪ್ರಜಾಪ್ರಭುತ್ವ ಚಳುವಳಿಯ ಮುಂದಾಳುವಾಗಿರಬೇಕಾಗಿರುವುದೂ ಕಾರ್ಮಿಕ ವರ್ಗವೇ. ಇಂತಹ ಜನತಾ ಪ್ರಜಾಪ್ರಭುತ್ವ ರಂಗದಲ್ಲಿ(peoples Democratic Front) ಕಾರ್ಮಿಕ ವರ್ಗವು ರೈತಾಪಿ ಜನತೆ, ಸಾಮ್ರಾಜ್ಯಶಾಹಿಗೆ ವಿರೋಧವಾಗಿರುವ, ಊಳಿಗಮಾನ್ಯ ವ್ಯವಸ್ಥೆ ಮತ್ತು ಗುತ್ತೇದಾರಿ ಬಂಡವಾಳಶಾಹಿಗೂ ವಿರೋಧವಾಗಿರುವ ಬಂಡವಾಳಶಾಹಿ ವರ್ಗದ ವಿಭಾಗಗಳ ಜೊತೆಗೂ ಮೈತ್ರಿ ಹೊಂದಿರುತ್ತದೆ.

ಬಂಡವಾಳಶಾಹಿ ಘೋಷಣೆ ಬಡವರ ಸೇವೆ

ಈ ತಿಳುವಳಿಕೆ ತುಂಬಾ ಸಂಕೀರ್ಣವಾದದ್ದು. ಮಾರ್ಕ್ಸ್-ಎಂಗೆಲ್ಸ್-ಲೆನಿನ್ ಮತ್ತುಎಲ್ಲ ಕ್ರಾಂತಿಕಾರಿಗಳೂ ಹೋರಾಟ ನಡೆಸಿದುದು ಈ ತಿಳುವಳಿಕೆಗಾಗಿಯೇ. ಅವಿಭಜಿತ ಕಮ್ಯುನಿಸ್ಟ್ ಪಕ್ಷದೊಳಗೂ ಇಂತಹ ಸರಿಯಾದ ತಿಳುವಳಿಕೆಗಾಗಿ ಗಂಭೀರವಾದ ಚರ್ಚೆ ಮತ್ತು ಆಂತರಿಕ ಹೋರಾಟ ನಡೆದಿತ್ತು. ಇದೀಗ ಈ ತಿಳುವಳಿಕೆಯನ್ನು 'ಬಡವರ ಕಡೆಗೆ ನಾವು ಬದ್ಧರಾಗಿರಬೇಕು' ಎಂಬ ತೀರಾ ಸರಳವಾದ ಮತ್ತು ತುಂಬಾ ಮುಗ್ಧ ತಿಳುವಳಿಕೆಯಂತೆ ಕಾಣುವ ವಾದಗಳ ಮೂಲಕ ವಿನಾಶ ಮಾಡಲು ಪ್ರಯತ್ನಿಸಲಾಗುತ್ತಿದೆ.

ಈ ತಪ್ಪು ತಿಳುವಳಿಕೆಗೂ ಬಂಡವಾಳಶಾಹಿ ವರ್ಗಗಳ 'ಬಡವರ ಸೇವೆ' ಎಂಬ ಸೋಗಿನ ಘೋಷಣೆಗೂ ನಿಕಟ ಸಂಬಂಧ ಇದೆ. 'ಬಡವರ ಸೇವೆ' ಎಂಬ ಘೋಷಣೆ ಪ್ರಾಮಾಣಿಕವಾಗಿದ್ದರೆ ಅದು ಸುಧಾರಣಾವಾದದ ರೂಪ ತಳೆಯ ಬಹುದು. ಅದಲ್ಲವಾದರೆ ಪುಟ್ಟ ಬಂಡವಾಳಶಾಹಿ(Petty bourgeoisie)ಯ ಕ್ರಾಂತಿವಾದದ ರೂಪ ತಳೆಯ ಬಹುದು.

ಕಾರ್ಮಿಕ ವರ್ಗದ ಐಕ್ಯತೆಯನ್ನು ಉಳಿಸಿ, ಬೆಳೆಸಿಕೊಳ್ಳಬೇಕಾದುದೇ ನಮ್ಮ ಪಕ್ಷದ ಧೋರಣೆ. ಇದನ್ನು ಅರ್ಥಮಾಡಿಕೊಳ್ಳಲಾರದ ಸಂಗಾತಿಗಳು ಕಾರ್ಮಿಕ ವರ್ಗವನ್ನು 'ಬಡವರು' 'ಶ್ರೀಮಂತರು' ಎಂಬುದಾಗಿ ವಿಭಜಿಸುವ ಧೋರಣೆಗೆ ಬಲಿಬೀಳುತ್ತಾರೆ. ಹೀಗೆ ಕಾರ್ಮಿಕರನ್ನು 'ಶ್ರೀಮಂತರು' 'ಬಡವರು' ಎಂಬುದಾಗಿ ವಿಂಗಡಿಸಿ ಅವರಲ್ಲಿ ಒಂದೊಂದು ಭಾಗವನ್ನು ಕ್ರಾಂತಿಯಿಂದ ದೂರವಿರಿಸುವ ಸಂಗಾತಿಗಳು ಕಾರ್ಮಿಕ ವರ್ಗದ ವಿಭಜನೆಗೆ ಕಾರಣರಾಗುವುದು ಮಾತ್ರ ಅಲ್ಲ; ಒಂದೇ ಕಾರ್ಖಾನೆಯೊಳಗೂ ಅಂತಹ ವಿಭಜನೆ ಮಾಡಿ ಆ ಮೂಲಕ ಅಲ್ಲಿನ ಕಾರ್ಮಿಕರು ಒಗ್ಗಟ್ಟಾಗಿ ಹೋರಾಟ ನಡೆಸುವ ಸಾಮರ್ಥ್ಯಕ್ಕೂ ಹಾನಿಯನ್ನುಂಟುಮಾಡುತ್ತಾರೆ. ಇದು ಅವರ ಸಂಘಟನೆಯಲ್ಲಿ ಒಡಕುಂಟುಮಾಡಿ ಅದನ್ನು ದುರ್ಬಲಗೊಳಿಸುತ್ತದೆ. ಅವರು ಒಗ್ಗಟ್ಟಿನಿಂದ ಪ್ರಬಲವಾದ ಹೋರಾಟಗಳನ್ನು ಮಾಡುವ ಸಾಧ್ಯತೆ ಕಮ್ಮಿಯಾಗುತ್ತದೆ; ಇಲ್ಲವೇ ನಾಶವಾಗುತ್ತದೆ. ಹಾಗಾಗಿ ಅಲ್ಲಿ ಅತ್ಯಂತ 'ಬಡವ'ರಾಗಿರುವ ಕಾರ್ಮಿಕರಿಗೂ ಏನಾದರೂ ಹೆಚ್ಚಿನ ಸವಲತ್ತುಗಳನ್ನು ಗಳಿಸಿಕೊಡುವ ನಮ್ಮ ಸಾಮರ್ಥ್ಯ ನಿರ್ನಾಮವಾಗುತ್ತದೆ. ಒಂದು ದೊಡ್ಡ ಕೈಗಾರಿಕೆಯಲ್ಲಿ ಇತ್ತೀಚಿಗೆ ಹೀಗೇ ನಡೆದಿದೆ. ಅಲ್ಲಿ ಈಗಾಗಲೇ ಇರುವ ಕಾರ್ಮಿಕ ಸಂಘಗಳ ಸಂಖ್ಯೆ ಹದಿನಾಲ್ಕು. ಇಷ್ಟು ಸಾಲದೆಂಬಂತೆ ಅಲ್ಲಿ ನಮ್ಮ ಸಂಗಾತಿಗಳೇ ಇನ್ನಷ್ಟು ವಿಭಜನೆ ಮತ್ತು ವಿಂಗಡಣೆಗೆ ನೆರವಾಗುತ್ತಿದ್ದಾರೆ. ಕಾರ್ಮಿಕರೆ ಐಕ್ಯತೆಗಾಗಿ ಹೋರಾಡಲು ಅವರು ಸುತರಾಂ ಒಪ್ಪುತ್ತಿಲ್ಲ. ನಾವು ಕೇವಲ 'ಬಡ ಕಾರ್ಮಿಕರ' ಟ್ರೇಡ್‌ಯೂನಿಯನ್ ಆಗಿಯೇ ಉಳಿದರೆ ತುಂಬಾ 'ಪರಿಶುದ್ಧ'ರಾಗಿರುತ್ತೇವೆ ಮತ್ತು 'ಜಾಸ್ತಿ ಕ್ರಾಂತಿಕಾರಿ' ಗಳಾಗಿರುತ್ತೇವೆನ್ನುವುದು ಮೂರ್ಖತನದ ಪರಮಾವಧಿ. ಆಡಳಿತ ವರ್ಗದ ಜೊತೆಗೆ ಮಾತುಕತೆ ನಡೆಸುವಾಗ ಅವರಿಂದ ಒಂದು ಕಪ್ ಚಹಾ ಕೂಡ ಸ್ವೀಕರಿಸಬಾರದು ಎನ್ನುವುದು ಇಂತಹ ಮೂರ್ಖ ಧೋರಣೆಯ ಫಲ. ಇದು ಅತ್ಯಂತ ಹಾಸ್ಯಾಸ್ಪದ. ಏವತ್ತಕ್ಕೂ ಹೆಚ್ಚಿನ ಜನಗಳ ಸಮ್ಮುಖದಲ್ಲಿ ಹಲವಾರು ಗಂಟೆಗಳ ಕಾಲ ಮಾತುಕತೆ ನಡೆಸಿದ ಮೇಲೆ ಒಂದು ಕಪ್ ಚಹಾ ಕುಡಿದರೆ ಅದರಿಂದ ನಮ್ಮ ನೈತಿಕತೆ ದೊಪ್ಪನೆ ಕುಸಿದು ನಾಶವಾಗಿ ಹೋಗುವುದಿಲ್ಲ.

ಕೋರ್ಟುಗಳ ಉಪಯೋಗ

ನಮ್ಮ ಸಂಗಾತಿಗಳು ಮಾಡುವ ಇನ್ನೊಂದು ದೊಡ್ಡ ತಪ್ಪೆಂದರೆ ಕಾನೂನು ಬದ್ಧ ಹೋರಾಟ ಮತ್ತು ಕಾನೂನಿನಿಂದ ಹೊರತಾದ ಹೋರಾಟಗಳನ್ನು

[6ನೇ ಪುಟ ನೋಡಿ]

ಆಗಸ್ಟ್ 3ರ ಅಖಿಲ ಭಾರತ ಚಳುವಳಿಯನ್ನು ಯಶಸ್ವಿಗೊಳಿಸಿ

[4ನೇ ಪುಟದಿಂದ]

ಸಂಘಕ್ಕೆ ಕೊಡುವುದಕ್ಕೆ 'ಚೆಕ್ ಆಫ್' ಪದ್ಧತಿ ಎಂದು ಕರೆಯುತ್ತಾರೆ. ತನ್ನ ಸಂಬಳದಿಂದ ಸಂಘದ ಸದಸ್ಯತ್ವದ ಚಂದಾ ಹಣವನ್ನು ಹಿಡಿದು ಇಂತಹ ಸಂಘಕ್ಕೆ ಕೊಡಬೇಕೆಂದು ಕಾರ್ಮಿಕ ಮಾಲೀಕರಿಗೆ ಬರೆದು ಕೊಡಬೇಕು. ಒಂದಕ್ಕಿಂತಲೂ ಹೆಚ್ಚು ಸಂಘ ಇರುವ ಕಡೆ ಕಾರ್ಮಿಕ ತನಗೆ ಬೇಕಾದ ಸಂಘದ ಸದಸ್ಯನಾಗಲು ಅಡ್ಡಿಯುಂಟಾಗುತ್ತದೆ. ತನ್ನ ಅಚ್ಚು ಮೆಚ್ಚಿನ, ಅಥವಾ ಕಾರ್ಮಿಕ ಹಿತರಕ್ಷಣೆ ಮಾಡುತ್ತದೆ ಎಂಬ ವಿಶ್ವಾಸವಿರುವ, ಕ್ಷಾತ್ರಶೀಲ ಕಾರ್ಮಿಕ ಸಂಘಕ್ಕೆ ತನ್ನ ಚಂದಾ ಕೊಡಬೇಕೆಂದು ಬರೆದುಕೊಟ್ಟರೆ ಮಾಲೀಕರಿಗೆ ಗೊತ್ತಾಗುತ್ತದೆ. ಗೊತ್ತಾದರೆ ಕಿರುಕುಳ ಕೊಡಬಹುದು ಎಂಬ ಎದರಿಕೆಯುಂಟಾಗುತ್ತದೆ. ಯಾವ ಸಂಘವನ್ನೂ ಆರಿಸದಿರುವಂತೆ ಇಲ್ಲ. ಮೂರು ತಿಂಗಳ ಒಳಗಾಗಿ ತನಗೆ ಇಂತಹ ಸಂಘ ಬೇಕು ಎಂದು ಬರೆದುಕೊಡದಿದ್ದರೆ ಕಾರ್ಮಿಕ ಹೆಚ್ಚು ಸದಸ್ಯರಿರುವ ಸಂಘದ ಸದಸ್ಯ ಎಂದು ಮಾಲೀಕರು ತೀರ್ಮಾನಿಸಿ ಚಂದಾ ಹಣವನ್ನು ಮುರಿದು ತಮಗೆ ಬೇಕಾದ ಸಂಘಕ್ಕೆ, ಎಂದರೆ ಸಾಮಾನ್ಯವಾಗಿ ಐ. ಎನ್. ಟಿ. ಯು. ಸಿ. ಸಂಘಕ್ಕೆ, ಕೊಡಲು ತಿದ್ದುಪಡಿ ಅವಕಾಶ ಮಾಡಿಕೊಡುತ್ತದೆ. ಒಲ್ಲದ ಸಂಘವನ್ನು ಕಾರ್ಮಿಕರ ಮೇಲೆ ಹೇರಲಾಗುತ್ತದೆ

ಸಾಮಾನ್ಯವಾಗಿ ಕಾರ್ಮಿಕರು ಮುಷ್ಕರ ಮಾಡುವಾಗ, ಮುಷ್ಕರವನ್ನು ಮುರಿಯಲು ಕರಿಗಾಲುಗಳನ್ನು, ರೌಡಿಗಳನ್ನು ಉಪಯೋಗಿಸುತ್ತಾರೆ. ಆ ಕೆಲಸಕ್ಕೆ ಅವರಿಗೆ ಹಣ ಕೊಡುತ್ತಾರೆ. ಈ ರೌಡಿಗಳು ತಾತ್ಕಾಲಿಕವಾಗಿ ಮುಷ್ಕರ ಮುರುಕರಾಗಿ ಕೆಲಸಮಾಡುತ್ತಾರೆ. ತಿದ್ದುಪಡಿ ಸೃಷ್ಟಿಸುವ ಕೈಗಾರಿಕಾ ಬಾಂಧವ್ಯಗಳ ಆಯೋಗ'ವು ಮಾಸಿಕ ಸಂಬಳ ಪಡೆಯುವ ಖಾಯಂ ಮುಷ್ಕರ ಮುರುಕ ಸಾಧನವಾಗುತ್ತದೆ. ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳು ಈ ಆಯೋಗಕ್ಕೆ ವಿವಾದಗಳನ್ನು ಇತ್ಯರ್ಥಕ್ಕೆ ಕಳಿಸುತ್ತವೆ. ವಿವಾದಗಳ ಇತ್ಯರ್ಥವಿಳಂಬವಾಗುತ್ತದೆ. ತೀರ್ಪು ಮಾಲೀಕರ ಪರವಾಗುತ್ತದೆಯೋ, ಕಾರ್ಮಿಕರ ಪರವಾಗಿರುತ್ತದೆಯೋ ಎಂಬುದು ಸರ್ಕಾರದ ನೀತಿಯನ್ನು ಅವಲಂಬಿಸುತ್ತದೆ. ಯಾಕೆಂದರೆ ಆಯೋಗವು ಸರ್ಕಾರದ ಮರ್ಜಿಯ ಪ್ರಕಾರ ನಡೆಯುತ್ತದೆ. ಈ ಆಯೋಗವು ಬಂದರೆ ಕಾರ್ಮಿಕರ ಬೇಡಿಕೆಗಳು ಏನಾಗಬಹುದು ?

'ಕೈಗಾರಿಕಾ ಬಾಂಧವ್ಯಗಳ ಆಯೋಗವು' ಅಸ್ತಿತ್ವಕ್ಕೆ ಬಂದನಂತರವೂ ಕಾರ್ಮಿಕ ನ್ಯಾಯಾಲಯಗಳಿರುತ್ತವೆ. ಆದರೆ ಅವುಗಳ ಕಾರ್ಯವ್ಯಾಪ್ತಿ ವೈಯುಕ್ತಿಕ ಅಥವಾ ವ್ಯಕ್ತಿಗತ ಅಹವಾಲುಗಳನ್ನು, ವಿವಾದಗಳನ್ನು ಇತ್ಯರ್ಥ ಪಡಿಸುವುದಕ್ಕೆ ಸೀಮಿತವಾಗಿರುತ್ತದೆ. ಆದರೆ ಕಾರ್ಮಿಕ ಇಲಾಖೆಯ ಸಂಧಾನಯಂತ್ರವು ನಿರುಪಯುಕ್ತವಾಗುತ್ತದೆ.

ಒಟ್ಟಾರೆ ಈ ತಿದ್ದುಪಡಿಗಳು ಕಾನೂನಾದರೆ ಕಾರ್ಮಿಕ ಸಂಘಗಳು ಅನೇಕ ನಿರ್ಬಂಧಗಳ ಇತಿ ಮಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಕಾರ್ಮಿಕರು ಬಂಡವಾಳಗಾರರ ಗುಲಾಮರಾಗಿ ಅವರು ಹೇಳಿದಂತೆ ಕೇಳಿಕೊಂಡು, ಕೊಟ್ಟದ್ದನ್ನು ತಗೆದುಕೊಂಡು ಕೆಲಸ ಮಾಡಬೇಕಾಗುತ್ತದೆ. ಶ್ರಮಭಾರ ಹೆಚ್ಚುತ್ತದೆ, ಶೋಷಣೆ ಹೆಚ್ಚುತ್ತದೆ. ಈ ಪರಿಸ್ಥಿತಿ ಬರಲು ಕಾರ್ಮಿಕರು ಖಂಡಿತ ಬಿಡುವುದಿಲ್ಲ.

ಕಾಂಗ್ರೆಸ್ ಸರ್ಕಾರದ ದಾಳಿ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳುವುದರಿಂದ ಮಾತ್ರ ತೃಪ್ತಿಹೊಂದುವುದಿಲ್ಲ. ಇದು ಸಾಲದೆಂಬಂತೆ ಕಾರ್ಮಿಕರ ಸಂಬಳದ ಮೇಲೆ ಕಾಂಗ್ರೆಸ್ ಸರ್ಕಾರವು ದಾಳಿಯನ್ನು ಯೋಜಿಸಿದೆ.

ಬೆಲೆಗಳು ಏರುತ್ತಾ ಹೋದಂತೆ ಕಾರ್ಮಿಕರ ಕೊಳ್ಳುವ ಶಕ್ತಿಯು ಕಡಿಮೆಯಾಗುತ್ತಾ ಹೋಗುತ್ತದೆ. ಈ ನಷ್ಟವನ್ನು ಸರಿತೂಗಿಸಲು ಕಾರ್ಮಿಕರಿಗೆ ತುಟ್ಟಿಭತ್ತೆ ಸಿಕ್ಕಬೇಕು. ತುಟ್ಟಿಭತ್ತೆ ಎಷ್ಟು ಸಿಕ್ಕಬೇಕು ಎನ್ನುವುದು ಬೆಲೆ ಎಷ್ಟು ಹೆಚ್ಚಾಗಿದೆ ಎಂಬುದನ್ನು ಅವಲಂಬಿಸುತ್ತದೆ. ಗ್ರಾಹಕರ ಬೆಲೆ ಸೂಚ್ಯಂಕವು ಬೆಲೆ ಎಷ್ಟು ಹೆಚ್ಚಾಗಿದೆ ಎಂಬುದನ್ನು ತೋರಿಸುತ್ತದೆ. ಅದರಲ್ಲಿ ಒಂದು ಪಾಲು ತುಟ್ಟಿಭತ್ತೆ ಕೊಡುತ್ತಾರೆ. ಅಂದರೆ ಇನ್ನೊಂದು ಪಾಲು ನಷ್ಟವೇ.

ಈಗ ಚಾಲ್ತಿಯಲ್ಲಿರುವ ಗ್ರಾಹಕರ ಬೆಲೆ ಸೂಚ್ಯಂಕ 1960-100ಎಂದು ಆಧಾರಿತವಾಗಿದ್ದು. ಈ ಸೂಚ್ಯಂಕದಲ್ಲಿ ದೋಷಗಳಿವೆ, ಇದರಿಂದ ಕಾರ್ಮಿಕರಿಗೆ ಸಿಕ್ಕಬೇಕಾದಷ್ಟು ತುಟ್ಟಿಭತ್ತೆ ಸಿಕ್ಕುತ್ತಿಲ್ಲ ಎಂದು ಕೇಂದ್ರಕಾರ್ಮಿಕ ಸಂಘಟನೆಗಳು ಅನೇಕ ವರ್ಷಗಳಿಂದ ದೋಷಗಳನ್ನು ಸರಿಪಡಿಸಲು ಸರ್ಕಾರವನ್ನು ಒತ್ತಾಯಿಸುತ್ತಾ ಬಂದುದರ ಪರಿಣಾಮವಾಗಿ 1978ರಲ್ಲಿ ಮೊರಾರ್ಜಿ ದೇಸಾಯಿ ಸರ್ಕಾರವು ರಾತ್ ಸಮಿತಿಯನ್ನು ನೇಮಿಸಿತು. ದೋಷಗಳನ್ನು ಸರಿಪಡಿಸಲು ರಾತ್ ಸಮಿತಿಯು ಕೆಲವು ಸಲಹೆಗಳನ್ನು ಕೊಟ್ಟಿದೆ. ಬೆಲೆಗಳನ್ನು ಸಂಗ್ರಹಿಸುವ ಕೆಲಸ ಮಾಡುವ ಸರ್ಕಾರಿ ನೌಕರರಲ್ಲಿ ಅನೇಕರು ಬಂಡವಾಳಗಾರರಿಂದ ಹಣ ಮತ್ತಿತರ ಸೌಲಭ್ಯಗಳನ್ನು ಪಡೆದು ಬೆಲೆಗಳು ಎಷ್ಟಿರುತ್ತವೇ ಅದಕ್ಕಿಂತಲೂ ಕಡಿಮೆ ಇದೆ ಎಂದು ಬರೆಯುತ್ತಾರೆ. ಇದರಿಂದ ವಾಸ್ತವವಾಗಿ ಬೆಲೆಗಳು ಏರುತ್ತಿದ್ದರೂ ಗ್ರಾಹಕರ ಬೆಲೆ ಸೂಚ್ಯಂಕವು ಕಡಿಮೆಯಾಗಿಯೇ ಇರುತ್ತದೆ. ಕಾರ್ಮಿಕರಿಗೆ ತುಟ್ಟಿಭತ್ತೆಯೂ ಕಡಿಮೆಯೇ ಸಿಕ್ಕುತ್ತದೆ. ಬೆಲೆಗಳನ್ನು ಸಂಗ್ರಹಿಸುವ ಕೆಲಸ ಮಾಡುವ ನೌಕರರು ಸ್ಥಳೀಯ ಕಾರ್ಮಿಕ ಸಂಘಗಳ ಪ್ರತಿನಿಧಿಗಳೊಂದಿಗೆ ಹೋಗಿ ಬೆಲೆಗಳನ್ನು ಸಂಗ್ರಹಿಸಬೇಕೆಂಬ ಕಾರ್ಮಿಕ ಸಂಘಗಳ ಸೂಚನೆಯನ್ನು ರಾತ್ ಸಮಿತಿಯು ಒಪ್ಪಿತು. ಅದು ಕೊಟ್ಟ ಸಲಹೆಗಳಲ್ಲಿ ಇದು ಒಂದು.

ರಾತ್ ಸಮಿತಿಯ ವರದಿಯನ್ನು ಸರ್ಕಾರವು ಒಪ್ಪಿಕೊಳ್ಳಲಿಲ್ಲ.

ಈಗಿರುವ ಸೂಚ್ಯಂಕದಲ್ಲಿರುವ ದೋಷಗಳನ್ನು ಸರಿಪಡಿಸದೆಯೇ ರಾಜೀವ್ ಗಾಂಧಿಯವರ ಕಾಂಗ್ರೆಸ್ ಸರ್ಕಾರವು 1982 ಆಧಾರಿತ ಸೂಚ್ಯಂಕವನ್ನು ತರಾತುರಿಯಿಂದ ಸಿದ್ಧಪಡಿಸಿ ಪ್ರಕಟಿಸಲು ಹೊರಟಿದೆ. ಬಂಡವಾಳಗಾರರಿಗೆ ಉಳಿತಾಯ ಮಾಡುವ ಉದ್ದೇಶದಿಂದ ಅವೈಜ್ಞಾನಿಕವಾಗಿ ತಯಾರಿಸಲ್ಪಟ್ಟಿರುವ ಸೂಚ್ಯಂಕವು ಈಗಿನ ಸೂಚ್ಯಂಕಕ್ಕಿಂತಲೂ 34ರಿಂದ 40 ಪಾಯಿಂಟುಗಳಷ್ಟು ಕಡಿಮೆ ತೋರಿಸುತ್ತದೆ. (ಈ ವಿಷಯವಾಗಿ ವಿವರವಾದ ಲೇಖನವನ್ನು 'ಸಿ.ಐ.ಟಿ.ಯು. ಸಂದೇಶ'ದಲ್ಲಿ ಆಗಸ್ಟ ಸಂಚಿಕೆಯಲ್ಲಿ ಓದಿರಿ) ಬೆಲೆಗಳು ವಿಪರೀತವಾಗಿ ಏರುತ್ತಿರುವಾಗ ತುಟ್ಟಿಭತ್ತೆ ಹೆಚ್ಚುವ ಬದಲು ಕಡಿಮೆಯಾಗುತ್ತದೆ. ಕಾರ್ಮಿಕರಿಗೆ ಸಿಕ್ಕಬೇಕಾದ ನೂರಾರು ಕೋಟಿ ರೂ. ತುಟ್ಟಿಭತ್ತೆ ಅವರಿಗೆ ಸಿಕ್ಕದೆ ಬಂಡವಾಳಗಾರರಿಗೆ ಉಳಿತಾಯವಾಗುತ್ತದೆ. ಕಾರ್ಮಿಕರ ಜೀವನ ಮಟ್ಟ ಕೆಳಗೆ ಇಳಿಯುತ್ತದೆ. ಕಾಂಗ್ರೆಸ್ ಸರ್ಕಾರವು ಹೀಗೆ ಕಾರ್ಮಿಕರ ಹೊಟ್ಟೆಯ ಮೇಲೆ ಹೊಡೆಯುತ್ತದೆ.

ಅಸಂಘಟಿತ ಕಾರ್ಮಿಕರಿಗೆ ಸಿಕ್ಕುತ್ತಿರುವ ಕೂಲಿ ತೀರಾ ಕಡಿಮೆಯಾಗಿದ್ದು ಅವರ ಜೀವನ ಬಡತನದ ರೇಖೆಯ ಕೆಳಗಿದೆ.

ಕಾರ್ಮಿಕರ ಹಕ್ಕುಗಳ ಮೇಲೆ ದಾಳಿಯಾಗುವ ಸೂಚನೆ ಕಂಡ ಕೂಡಲೇ 1986 ಸೆಪ್ಟಂಬರ್‌ನಲ್ಲಿ ಕೇಂದ್ರ ಸರ್ಕಾರ ಕರೆದಿದ್ದ ಕಾರ್ಮಿಕ ಸಭೆಯಲ್ಲಿ ಪಶ್ಚಿಮ ಬಂಗಾಳ ಮತ್ತು ತ್ರಿಪುರಗಳ ಎಡರಂಗ ಸರ್ಕಾರಗಳ ಕಾರ್ಮಿಕ ಮಂತ್ರಿಗಳು ಟಿ.ಯು. ಮತ್ತು ಐ.ಡಿ. ಕಾಯಿದೆಗಳಿಗೆ ಕೇಂದ್ರ ಸರ್ಕಾರ ತರುವ ತಿದ್ದುಪಡಿಗಳನ್ನು ಉಗ್ರವಾಗಿ ವಿರೋಧಿಸಿದ್ದಾರೆ. ಅದೇ ತಿಂಗಳು ನವದೆಹಲಿಯಲ್ಲಿ ನಡೆದ ಸಿ.ಐ.ಟಿ.ಯು. ಕಾರ್ಯಕಾರಿ ಸಮಿತಿಯ ಸಭೆಯು ತಿದ್ದುಪಡಿಗಳ ಮೂಲಕ ದಾಳಿಯ ವಿರುದ್ಧವಾಗಿ ಪ್ರತಿಭಟನಾ ಚಳುವಳಿ ನಡೆಸಲು ಕರೆಕೊಟ್ಟಿತು. ಆ ತರುವಾಯ ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯ ಕರೆಯ ಪ್ರಕಾರ 1987 ಏಪ್ರಿಲ್ 16 ರಂದು ದೇಶಾದ್ಯಂತ ಪ್ರತಿಭಟನೆ ನಡೆಯಿತು.

ಕಾರ್ಮಿಕ ಸಂಘಗಳ ಕಾಯಿದೆ ಮತ್ತು ಕೈಗಾರಿಕಾ ವಿವಾದಗಳ ಕಾಯಿದೆಗಳಿಗೆ ತರಲು ಉದ್ದೇಶಿಸಿರುವ ತಿದ್ದುಪಡಿಗಳನ್ನು ಕೈಬಿಡಬೇಕು, ಇರುವ ದೋಷಗಳನ್ನು ಸರಿಪಡಿಸದೆ ಹೊಸ ಸೂಚ್ಯಂಕವನ್ನು ತರಕೂಡದು, ಅಸಂಘಟಿತ ಕಾರ್ಮಿಕರಿಗೆ ಬಡತನದ ರೇಖೆಗಿಂತ ಮೇಲೆ ಬದುಕಲು ಸಾಧ್ಯವಾಗುವಷ್ಟು ಕನಿಷ್ಟ ಕೂಲಿಯನ್ನು ನಿಗದಿ ಮಾಡಿ ಪ್ರಕಟಿಸಬೇಕು ಎಂದು ಒತ್ತಾಯಿಸಲು ದೇಶಾದ್ಯಂತ 3-8-87 ರಂದು ಕೇಂದ್ರ ಸರ್ಕಾರದ ಕಛೇರಿಗಳ ಮುಂದೆ ಅಖಿಲ ಭಾರತ ಸತ್ಯಾಗ್ರಹವನ್ನು ಸಾಮೂಹಿಕವಾಗಿ ನಡೆಸಿ ಬಂಧನಕ್ಕೆ ಗುರಿಯಾಗಿ ಕಾಂಗ್ರೆಸ್ ಸರ್ಕಾರದ ದಾಳಿಯನ್ನು ಹಿಮ್ಮೆಟ್ಟಿಸಬೇಕೆಂದು ಕಾರ್ಮಿಕ ಸಂಘಗಳ ರಾಷ್ಟ್ರೀಯ ಆಂದೋಳನ ಸಮಿತಿಯು ಕರೆ ಕೊಟ್ಟಿದೆ. ಸಿ.ಐ.ಟಿ.ಯು. ಪದಾಧಿಕಾರಿಗಳ ಸಭೆಯು ಕರ್ನಾಟಕದಲ್ಲಿ ಸಿ.ಐ.ಟಿ.ಯು. ಸಂಘಗಳು ಮುಷ್ಕರ ನಡೆಸಿ 3-8-87ರ ಹೋರಾಟವನ್ನು ಯಶಸ್ವಿಗೊಳಿಸಬೇಕೆಂದು ಕರೆ ಕೊಟ್ಟಿದೆ.

ಎಲ್ಲಾ ಕಾರ್ಮಿಕ ಬಾಂಧವರೂ ತಮ್ಮ ಹಕ್ಕುಗಳ ಮತ್ತು ಸಂಬಳದ ಮೇಲೆ ಕಾಂಗ್ರೆಸ್ ಸರ್ಕಾರವು ನಡೆಸಲು ಹೊರಟಿರುವ ದಾಳಿಗಳ ಗಾಂಭೀರ್ಯವನ್ನು ಮನಗಂಡು ಮುಷ್ಕರ, ಸತ್ಯಾಗ್ರಹ, ಬಂಧನಗಳು ಯಶಸ್ವಿಮಾಡಲು ಶ್ರಮಿಸಬೇಕು.

ದೇಶದ ಕಾರ್ಮಿಕರು ಮನಸ್ಸು ಮಾಡಿದರೆ, ಅವರಿಗೆ ಸರಿಯಾದ ಮಾರ್ಗದರ್ಶನ ದೊರೆತರೆ ಐಕ್ಯ ಹೋರಾಟದ ಮೂಲಕ ಈ ದಾಳಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಿದೆ ಎಂಬ ತಿಳುವಳಿಕೆಯಿಂದ 3-8-1987ರ ಹೋರಾಟದತ್ತ ಮುನ್ನಡೆಯೋಣ. ●

ಸಂಕುಚಿತ ಪಂಥವಾದಿ ಪ್ರವೃತ್ತಿ

(5ನೇ ಪುಟದಿಂದ)

ಜಾಣತನದಿಂದ ಬೆಸೆಯುವ ಕೆಲಸದಲ್ಲಿ ವಿಫಲತೆ. ಅವರ ಪ್ರಕಾರ ನಾವು ಕೇವಲ ಪಿಕೆಟಿಂಗ್ ಮಾಡಬೇಕು ಮತ್ತು ಪ್ರದರ್ಶನಗಳನ್ನು ಏರ್ಪಡಿಸಬೇಕು. (ಇಂತಹಪ್ರದರ್ಶನಗಳಾದರೋ ಎಷ್ಟು ಬೃಹತ್ತಾಗಿರುವುದಕ್ಕೆ ಸಾಧ್ಯ!) ನಾವು ಪತ್ರಗಳನ್ನು ಬರೆಯಬೇಕಾಗಿಲ್ಲ, ಸರಿಯಾದ ಬೇಡಿಕೆಗಳನ್ನು ಸಲ್ಲಿಸಬೇಕಾಗಿಲ್ಲ, ಮನವಿ ಸಲ್ಲಿಸುವುದು ಬೇಡ, ಅಥವಾ ಕಾರ್ಮಿಕ ಕಾಯಿದೆಗಳನ್ನು ಕ್ರಮಬದ್ಧವಾಗಿ ಅನುಷ್ಠಾನಕ್ಕೆ ತರುವಂತೆ ಒತ್ತಾಯ ಹೇರಲು ವಿವಿಧ ವೇದಿಕೆಗಳನ್ನು ಬಳಸಿಕೊಳ್ಳಬೇಕಾಗಿಲ್ಲ, ಎಂದೇ ಅವರು ಭಾವಿಸಿದ್ದಾರೆ. ಹೀಗೆಲ್ಲ ಮಾಡಿಬಿಟ್ಟರೆ ನಾವು ಬಂಡವಾಳಶಾಹಿ ನ್ಯಾಯ ನಿರ್ಣಯ ವ್ಯವಸ್ಥೆಯ ಭ್ರಮೆಗೆ ಬಲಿಬಿದ್ದಂತೆ ಎಂದು ಅವರ ನಂಬಿಕೆ. ಬಂಡವಾಳಶಾಹಿ ನ್ಯಾಯ ವ್ಯವಸ್ಥೆಯ ಕುರಿತು ಯಾವುದೇ ಭ್ರಮೆ ಸೃಷ್ಟಿಸಲ್ಪಡುವುದನ್ನು ವಿರೋಧಿಸುವ ಮಟ್ಟಿಗೆ ಈ ಸಂಗಾತಿಗಳ ನಿಲುವು ಸರಿ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ 'ಪರಿಹಾರ' ಭ್ರಾಮಕವಾಗಿರುತ್ತದೆ; 'ದಮನ' ವಾಸ್ತವವಾಗಿರುತ್ತದೆ ಎನ್ನುವುದೂ ನಿಜ. ಹಾಗೆಯೇ ಕೋರ್ಟು ಕಛೇರಿಗಳನ್ನು ಅವಲಂಬಿಸದೇ ಹೋರಾಟದ ವಿಧಾನಗಳಲ್ಲಿ ನಂಬಿಕೆಯಿಟ್ಟಿರುವುದೂ ಸರಿ. ಆದರೆ ಸಮರಶೀಲ ಹೋರಾಟಗಳನ್ನು ನಡೆಸಬೇಕಾದರೂ ಅದಕ್ಕಿಂತ ಮೊದಲು ನಮಗೆ ಸದ್ಯ ಲಭ್ಯವಿರುವ ಕೆಲವೊಂದು ವೇದಿಕೆಗಳನ್ನು ಉಪಯೋಗಿಸಿಕೊಳ್ಳಬೇಕೆನ್ನುವುದನ್ನು ಅವರು ಅರ್ಥಮಾಡಿಕೊಳ್ಳುವುದೇ ಇಲ್ಲ. ಮೊತ್ತ ಮೊದಲಿಗೆ ನಾವು ಸರಿಯಾದ ಬೇಡಿಕೆಗಳನ್ನು ಮುಂದೊಡ್ಡಬೇಕು, ಅಹವಾಲುಗಳನ್ನು ಸಲ್ಲಿಸಬೇಕು. ನಾವು ಕೈಗೊಂಡ ಹೆಜ್ಜೆಗಳ ಕುರಿತು ಕಾರ್ಮಿಕರಿಗೆ ತಿಳುವಳಿಕೆ ನೀಡಬೇಕು. ಕಾರ್ಮಿಕ ಕಾಯಿದೆಗಳಲ್ಲಿರುವ ಹುಳುಕುಗಳನ್ನು ಅವರಿಗೆ ತೋರಿಸಿಕೊಡಬೇಕು. ನಮ್ಮ ಹೋರಾಟದ ಮೂಲಕವೇ ನಾವು ಪರಿಹಾರಗಳಿಸಿಕೊಳ್ಳಬೇಕೆಂಬ ಸತ್ಯವನ್ನು ಕಾರ್ಮಿಕರಿಗೆ ತಿಳಿಹೇಳಬೇಕು. ಈ ಹೋರಾಟವನ್ನು ಸಂಘಟಿಸುವಾಗಲೂ ನಮ್ಮಲ್ಲೇ ಚಂಚಲಚಿತ್ತರಾಗಿರುವವರನ್ನು ಸರಿಪಡಿಸಿಕೊಳ್ಳಬೇಕು. ಹೋರಾಟ ಪ್ರಾರಂಭಿಸುವ ಮೊದಲು ನಾವು ಕೈಗೊಳ್ಳುವ ಈ ಸರಿಯಾದ ಹೆಜ್ಜೆಗಳೇ ನಮ್ಮ ಶಿಬಿರದ ಬಲವನ್ನು ಹೆಚ್ಚಿಸಿ ಶತ್ರು ಪಾಳೆಯವನ್ನು ದುರ್ಬಲಗೊಳಿಸಬಲ್ಲವು. ಕಾನೂನಿನ ಕ್ರಮ ಮತ್ತು ಕಾನೂನಿನಿಂದ ಹೊರತಾದ ಕ್ರಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ನಿಭಾಯಿಸುವುದಕ್ಕೆ ತೀರಾ ಅಗತ್ಯ.

ಇನ್ನೂ ಕೆಲವು ಸಂಗಾತಿಗಳಿದ್ದಾರೆ. ಇವರು ಸ್ವಭಾವತಃ ಕಾನೂನುವಾದಿಗಳಲ್ಲ; ಸಮರಶೀಲ ಕಾರ್ಯಕರ್ತರೇ. ಆದರೂ ವಾಸ್ತವಿಕವಾಗಿ ಇವರು ಒಮ್ಮೊಮ್ಮೆ ಕಾನೂನು ಪಂಡಿತರಾಗಿಬಿಡುತ್ತಾರೆ. ಈ ಮೇಲೆ ವಿವರಿಸಿದ ಸಂಗಾತಿಗಳು ಒಂದು ಕೊನೆಯಲ್ಲಿದ್ದರೆ ಇವರು ಇನ್ನೊಂದು ತುದಿಯಲ್ಲಿ ಇರುವವರು. ಕೈಯಲ್ಲಿ ಕಾರ್ಮಿಕ ಶಾಸನಗಳ ಪುಸ್ತಕ ಹಿಡಿದುಕೊಂಡ ಇವರು ಬಂಡವಾಳಶಾಹಿ ವರ್ಗದ ಕಡೆಗೆ ಒಂದೇ ಸಮನೆ ವಾದ ವಿವಾದಗಳ ಬಾಣಗಳನ್ನು ಎಸೆಯುತ್ತಾರೆ. ಇವರು ಓದಿರುವುದು ಮತ್ತು ಅರ್ಥೈಸಿಕೊಂಡಿರುವುದು ಬರಹದಲ್ಲಿರುವ ಕಾನೂನುಗಳನ್ನು ಮಾತ್ರ. ಅವುಗಳ ಹಿಂದೆ ಕೈವಾಡ ನಡೆಸುತ್ತಿರುವ ಶಕ್ತಿಗಳನ್ನು ಅವರು ಗುರುತಿಸುವುದೇ ಇಲ್ಲ. ಬಂಡವಾಳಶಾಹಿ ಕಾನೂನುಗಳು ಉಪದೇಶಿಸುವುದು ಏನು, ಅವರು ಮಾಡುವುದು ಏನು ಎಂಬ ಕುರಿತು ಒಂದು ಸಮತೋಲಕ್ಕೆ ಬರಲು ಈ ಸಂಗಾತಿಗಳಿಗೆ ಸಾಧ್ಯವಾಗುವುದೇ ಇಲ್ಲ. ನಮ್ಮ ಸ್ವಂತ ಸಾಮರ್ಥ್ಯದ ಆಧಾರದ ಮೇಲೆ ನಮ್ಮ ಸಂಘಟನಾತ್ಮಕ ಶಕ್ತಿಯನ್ನು ಬೆಳೆಸಿಕೊಳ್ಳಲು ನಾವೇನು ಸಾಧಿಸಬೇಕು ಎನ್ನುವುದನ್ನು ಅವರು ಅವಶ್ಯವಾಗಿ ಯೋಚನೆ ಮಾಡಬೇಕು. ಇದರ ಬದಲು ಈ ಸಂಗಾತಿಗಳು ಯಾವುದೇ ಒಪ್ಪಂದಕ್ಕೆ ಬರಲಾಗದಂತಹ ನಿಲುವೆಯನ್ನು ತಳೆಯುತ್ತಾರೆ; ಮತ್ತು 'ಸಮರಶೀಲ' ಹೋರಾಟಕ್ಕೆ ಧುಮುಕುತ್ತಾರೆ. ಈ ಹೋರಾಟಗಳನ್ನು ಮುನ್ನಡೆಸಲು ಅವರಿಂದ ಸಾಧ್ಯವಾಗದೇ ಹೋದಾಗ ಅವರ ಸಂಘಟನೆಯಲ್ಲಿ ಒಡಕುಂಟಾಗುತ್ತದೆ. ಆಗ ಇದೇ ಸಂಗಾತಿಗಳು ತಾವು ತೀಕ್ಷ್ಣವಾಗಿ ದ್ವೇಷಿಸುವ ಇಂದಿನ ವರ್ಗ ವ್ಯವಸ್ಥೆಯ ಅಂಗವಾಗಿರುವ ಕೋರ್ಟುಗಳಲ್ಲಿ ಕರೀ ಕೋಟು ಧರಿಸಿ "ಯುವರ್ ಆನರ್" ಎಂದು ವಾದ ಪ್ರಾರಂಭಿಸಬೇಕಾಗುತ್ತದೆ.

[ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು]

ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಹೋರಾಟ

ಕೃಷ್ಣಾ ಮೇಲ್ದಂಡೆ ಯೋಜನೆಯ ವ್ಯಾಪ್ತಿಯಲ್ಲಿ ಬರುವ ರಾಯಚೂರು, ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆಗಳ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರುಗಳ ಸಭೆ ಜೂನ್ 28 ರಂದು ಶಹಾಪುರದಲ್ಲಿ ನಡೆಯಿತು. ರೈತ ಸಂಘದ ರಾಜ್ಯ ಸಮಿತಿ ಉಪಾಧ್ಯಕ್ಷರಾದ ಕಾ॥ ಭೀಮಸಿ ಕಲಾದಗಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿಯ ಸಹ ಕಾರ್ಯದರ್ಶಿ ಕಾ॥ ಚಂದ್ರಶೇಖರ ಬಾಳೆ ಕೃಷ್ಣಾ ಮೇಲ್ದಂಡೆ ಯೋಜನೆಯ ಕುರಿತು ವಿವರಿಸುತ್ತಾ, ಜವಹರಲಾಲ್ ನೆಹರು ದೇಶದ ಪ್ರಧಾನಿಯಾಗಿದ್ದಾಗ ಬರಗಾಲಕ್ಕೆ ಶಾಶ್ವತ ಪರಿಹಾರ ಒದಗಿಸಲು ಈ ಯೋಜನೆಯನ್ನು ರೂಪಿಸಲಾಯಿತು. ಈಗಾಗಲೇ 30 ವರ್ಷಗಳು ಗತಿಸಿದ್ದರೂ 20ಲಕ್ಷ ಎಕರೆ ಜಮೀನಿಗೆ ನೀರು ಒದಗಿಸಬೇಕಾಗಿದ್ದ ಈ ಯೋಜನೆ ಇಲ್ಲಿಯವರೆಗೆ 1ಲಕ್ಷ ಎಕರೆ ಜಮೀನಿಗೂ ನೀರು ಒದಗಿಸಲು ಸಾಧ್ಯವಾಗಲಿಲ್ಲ. ಬಂಡವಾಳಶಾಹೀ ಭೂಮಾಲಕ ಕೃಷಿ ನೀತಿಯಿಂದಾಗಿ ರಾಜ್ಯದಲ್ಲಿ ನಿರಂತರವಾಗಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷದ ಧೋರಣೆಯಿಂದಾಗಿ ಈ ಯೋಜನೆ ಕಾರ್ಯಗತವಾಗದೆ ಉಳಿದಿದೆ. ಜನತಾ ಪಕ್ಷದ ಸರ್ಕಾರವೂ ಕಾಂಗ್ರೆಸ್ ನೀತಿಯನ್ನು ಅನುಸರಿಸುತ್ತಿದೆ. ಇಂತಹ ಸಂದರ್ಭದಲ್ಲೇ ಅಖಿಲ ಭಾರತ ಕಿಸಾನ್ ಸಭಾ ಸಪ್ಟೆಂಬರ್ 7ರಿಂದ 13ರವರೆಗೆ ಕೇಂದ್ರ ಸರ್ಕಾರದ ಕೃಷಿ ನೀತಿಯನ್ನು ಪ್ರತಿಭಟಿಸಿ ರಾಷ್ಟ್ರವ್ಯಾಪೀ ಪಿಕೆಟಿಂಗ್ ಕಾರ್ಯಕ್ರಮ ನಡೆಸಲು ಕರೆ ನೀಡಿದೆ. ಈ ಹಿನ್ನೆಲೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತೀವ್ರ ಗತಿಯಲ್ಲಿ ಜಾರಿಗೊಳಿಸುವಂತೆ ಹೋರಾಟ ನಡೆಸಲು ಅಗತ್ಯವಾದ ಅಂಶಗಳ ಬಗ್ಗೆ ಮೂರು ಜಿಲ್ಲೆಗಳ ರೈತ ನಾಯಕರು ಸಭೆಯಲ್ಲಿ ಕೂಲಂಕಶ ಚರ್ಚೆ ನಡೆಸಬೇಕೆಂದು ಕರೆ ನೀಡಿದರು.

ಈಗಾಗಲೇ ಎಡದಂಡೆ ಕಾಲುವೆಗೆ 500ಕೋಟಿಗೂ ಹೆಚ್ಚು ಹಣ ಖರ್ಚಾಗಿದ್ದು ಇಲ್ಲಿ ನಡೆದಿರುವ ವ್ಯಾಪಕ ಭ್ರಷ್ಟಾಚಾರದಲ್ಲಿ ಮೇಲ್ಮಟ್ಟದ ಅಧಿಕಾರಿಗಳು, ಗುತ್ತಿಗೆದಾರರು, ಸ್ಥಳೀಯ ಶಾಸಕರು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಮಂತ್ರಿಗಳೂ ಒಳಗೊಂಡಿರುವುದು ತಿಳಿದು ಬಂದಿದೆ. ಸಭೆಯು ಈ ಎಲ್ಲದರ ಬಗ್ಗೆ ವ್ಯಾಪಕ ಚರ್ಚೆ ನಡೆಸಿ ಕೆಳಕಂಡ ತೀರ್ಮಾನಗಳನ್ನು ಕೈಗೊಂಡಿದೆ.

1. ಅಗಸ್ಟ 10ರ ಒಳಗೆ ರಾಯಚೂರು, ಬಿಜಾಪುರ, ಗುಲ್ಬರ್ಗ ಜಿಲ್ಲೆಯ 10ತಾಲ್ಲೂಕುಗಳಿಂದ ಕಾಲ್ನಡಿಗೆ ಜಾಥಾ ಮುಖಾಂತರ ಭ್ರಷ್ಟಾಚಾರದ ಕೇಂದ್ರ ಸ್ಥಾನವೆನಿಸಿರುವ ಭೀಮರಾಯನ ಗುಡಿಗೆ ಬಂದು ಬೃಹತ್ ಪ್ರಮಾಣದಲ್ಲಿ ಸಮಾವೇಶಗೊಂಡು ಸರ್ಕಾರಕ್ಕೆ ಅಂತಿಮ ಎಚ್ಚರಿಕೆ ನೀಡಿ ಸೆಪ್ಟಂಬರ್ 7ರಿಂದ 13ರವರೆಗೆ ಆಯಾ ತಾಲ್ಲೂಕು ಕೇಂದ್ರಗಳಲ್ಲಿ ಯಶಸ್ವಿ ಪಿಕೆಟಿಂಗ್ ನಡೆಸುವುದು.

2. ಈ ಮೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಇತರ ರೈತ ಸಂಘಟನೆಗಳು ಪ್ರಜಾಸತ್ತಾತ್ಮಕ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಂತೆ ಜಂಟಿ ಹೋರಾಟ ಸಮಿತಿಗಳನ್ನು ರಚಿಸಿ ವಿಶಾಲ ಹೋರಾಟಗಳನ್ನು ರೂಪಿಸುವುದು.

ಸಭೆಯಲ್ಲಿ ಮೂರು ಜಿಲ್ಲೆಗಳ ಪ್ರಮುಖ ರೈತ ಮುಖಂಡರಲ್ಲದೆ ರೈತ ಸಂಘದ ರಾಜ್ಯ ಸಮಿತಿ ಉಪ ಕಾರ್ಯದರ್ಶಿ ಕಾ॥ ಕಲ್ಲಪ್ಪ ಕಿಣಗಿ, ರಾಜ್ಯ ಸಮಿತಿ ಸದಸ್ಯರಾದ ಕಾ॥ ಮಾನ್‌ಪಡೆ, ಕಾ॥ ಹೊನ್ನುಟಗಿ, ಕಾ॥ ಆರ್. ಬಸವರಾಜ್ ಮುಂತಾದವರು ಭಾಗವಹಿಸಿದ್ದರು.

ಪೋಲೀಸ್ ದೌರ್ಜನ್ಯ

ಬಿಜಾಪುರ ಗ್ರಾಮೀಣ ವಲಯದ ಸಬ್ ಇನ್ಸ್‌ಪೆಕ್ಟರ್ ತೋಳಮಟ್ಟಿ ಎಂಬುವರು ಮುಗ್ಧ ನಿರಪರಾಧಿ ರೈತರ ಮೇಲೆ ಸುಳ್ಳು ಕೇಸುಗಳನ್ನು ಹಾಕಿದ್ದನ್ನು ಡಿ.ವೈ.ಎಫ್.ಐ.ನ ಬಿಜಾಪುರ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ. ಮೇಲ್ದಂಡೆ ಪೋಲೀಸ್ ಅಧಿಕಾರಿಯ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಹಿರಿಯ ಪೋಲೀಸ್ ಅಧಿಕಾರಿಗಳಿಗೂ ಮತ್ತು ಗೃಹ ಸಚಿವರಿಗೂ ದೂರು ಸಲ್ಲಿಸಿದ್ದರೂ ಸಹ ಯಾವುದೇ ಪ್ರಯೋಜನವಾಗಿಲ್ಲ. ಜೂನ್ 26ರಂದು ಡಿ.ವೈ.ಎಫ್.ಐ. ಮುಖಂಡರುಗಳಾದ ನಿಂಗಪ್ಪ ಕೆಂಚಪ್ಪ ಪೂಜಾರಿ, ಮನ್ನೂಸಾಬ ಕಲಾದಗಿ, ಸದಾನಂದ ಮೋಡಿ ಅವರುಗಳು ಡಿ.ವೈ.ಎಸ್.ಪಿ. ಮತ್ತು ಎಸ್.ಪಿ. ಅವರನ್ನು ಸ್ವತಃ ಭೇಟಿಮಾಡಿ ಸಬ್‌ಇನ್ಸ್‌ಪೆಕ್ಟರರ ದಬ್ಬಾಳಿಕೆ ಬಗ್ಗೆ ವಿವರಿಸಿದರು. ಡಿ.ವೈ.ಎಸ್.ಪಿ.ಅವರು ಸಿ.ಪಿ.ಐ. ಅವರಿಗೆ ಆದೇಶ ನೀಡಿ ಈಬಗ್ಗೆ ತುರ್ತುವಿಚಾರಣೆ ನಡೆಸಬೇಕೆಂದು ಒತ್ತಾಯಿಸಿದರು. ಇದರಿಂದಕುಪಿತನಾದ ಡಿ.ವೈ.ಎಸ್.ಪಿ. ಮತ್ತೆ ಡಿ.ವೈ.ಎಫ್.ಐ. ಮುಖಂಡರುಗಳನ್ನು ಠಾಣೆಗೆ ಹಿಡಿದೊಯ್ದು ಹೊಡೆದಿದ್ದಾನೆ. ನಂತರ ಅವರನ್ನು ಜೈಲಿಗೂ ಹಾಕಿಸಿದ್ದಾನೆ. ಈ ರೀತಿ ದಬ್ಬಾಳಿಕೆ ನಡೆಸುತ್ತಿರುವ ಡಿ.ವೈ.ಎಸ್.ಪಿ.ಅನ್ನು ಅಮಾನತ್ತುಗೊಳಿಸಿ ತನಿಖೆ ನಡೆಸಬೇಕೆಂದು ಒತ್ತಾಯಿಸಿರುವ ಡಿ.ವೈ.ಎಫ್.ಐ. ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಸಿ.ಪಿ.ಐ.(ಎಂ)ಸಂಘಟನೆಗಳು ಜುಲೈ 7ರಿಂದ ಸರದಿ ಸತ್ಯಾಗ್ರಹವನ್ನು ಪ್ರಾರಂಭಿಸಿವೆ. ಈ ಬಗ್ಗೆ ಸಂಬಂಧಿಸಿದ ಮೇಲಧಿಕಾರಿಗಳು ಕ್ರಮ ಕೈಗೊಳ್ಳದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದೆಂದು ಎಚ್ಚರಿಕೆ ನೀಡಲಾಗಿದೆ.

ಅಕ್ರಮ ನೀರು ಕಂದಾಯಕ್ಕೆ ಖಂಡನೆ

ಮಲಪ್ರಭಾ ಅಚ್ಚು ಕಟ್ಟು ಪ್ರದೇಶದ ರೈತರಿಗೆ ರಾಜ್ಯ ಸರ್ಕಾರವು 5ವರ್ಷದ ನೀರಿನ ಕಂದಾಯವನ್ನು ಒಂದೇ ಬಾರಿಗೆ ವಿಧಿಸಿ ವಸೂಲು ಮಾಡುವ ಆಜ್ಞೆಯನ್ನು ಜಾರಿಗೊಳಿಸಿದೆ. 5ವರ್ಷಗಳ ನಂತರ ನೀರಿನ ಕಂದಾಯ ವಸೂಲುಮಾಡುವುದಾಗಿ ಆಶ್ವಾಸನೆ ನೀಡಿದ್ದ ಸರ್ಕಾರ ಈಗ ಅದನ್ನು ಉಲ್ಲಂಘಿಸಿ ರೈತರ ಮೇಲೆ ಅಕ್ರಮವಾಗಿ ನೀರಿನ ತೆರಿಗೆ ವಿಧಿಸಿರುವುದನ್ನು ಸಿ.ಪಿ.ಐ.(ಎಂ) ಶಾಸಕರಾದ ಕಾ.ಆರ್.ವೆಂಕಟರಾಮಯ್ಯ ತೀವ್ರವಾಗಿ ಖಂಡಿಸಿದ್ದಾರೆ. ಅವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ನೀರಿನ ಕಂದಾಯ ವಿಧಿಸಿರುವ ಸರ್ಕಾರದ ವಿಧಾನವು ನ್ಯಾಯಯುತವಾಗಿಲ್ಲ, ಎಕರೆಗೆ 1000 ರೂಪಾಯಿಗೂ ಹೆಚ್ಚು ವಿಧಿಸಲಾಗಿದೆ. ಇದನ್ನು ಸರಕಾರ ಪುನರ್ ಪರಿಶೀಲಿಸಿ ಈಗಿನ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

○

ಪನಾಮ ಕಾಲುವೆ :

ಅಮೇರಿಕನ್ ಕುತಂತ್ರ

ಕ್ರಿ.ಶ. 2000ದ ನಂತರವೂ ಪನಾಮ ಕಾಲುವೆ ಪ್ರದೇಶದಲ್ಲಿರುವ ಅಮೇರಿಕನ್ ಸೇನಾ ಪಡೆಗಳನ್ನು ಉಳಿಸಿಕೊಳ್ಳಲು ಅಮೇರಿಕನ್ ಸರ್ಕಾರ, ಪನಾಮ ಸರ್ಕಾರದೊಂದಿಗೆ ಅನಧಿಕೃತ ಗುಪ್ತ ಮಾತುಕತೆ ಆರಂಭಿಸಿದೆ. 1977ರಲ್ಲಿ ಸಹಿ ಹಾಕಿದ ಒಪ್ಪಂದದ ಪ್ರಕಾರ ಕ್ರಿ.ಶ.2000ದ ಹೊತ್ತಿಗೆ ಪನಾಮ ಕಾಲುವೆಯನ್ನು ಸಂಪೂರ್ಣ ಸರ್ಕಾರಕ್ಕೆ ವಹಿಸಿಕೊಡುವುದಲ್ಲದೆ ಸೇನಾ ಪಡೆ ಮತ್ತು ನೆಲೆಗಳನ್ನು ಖಾಲಿಮಾಡಬೇಕಾಗಿತ್ತು. ಈ ನೆಲೆಯಲ್ಲಿ ಸುಮಾರು 10.000 ಮಂದಿ ಅಮೇರಿಕನ್ ಸೈನಿಕರು ಮತ್ತು ಅಣ್ವಸ್ತ್ರಗಳು ಇವೆ ಎಂದು ಹೇಳಲಾಗಿದೆ.

ಅ.ಸಂ.ಸಂ. ಪನಾಮ ಕಾಲುವೆ ಅಧಿಕೃತವಾಗಿ ಆರಂಭವಾದಂದಿನಿಂದ ಅದನ್ನು ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡಿದೆ. ಕಾಲುವೆ ಅಪಾರ ಲಾಭದ ಮೂಲವೂ ಆಗಿದೆ. 1986ರಲ್ಲಿ ಕಾಲುವೆಯಿಂದ ಬಂದ 33.3 ಕೋಟಿ ಡಾಲರುಗಳಲ್ಲಿ, ಕೇವಲ 7.7ಕೋಟಿ ಡಾಲರುಗಳನ್ನು ಮಾತ್ರ ಪನಾಮಕ್ಕೆ ಕೊಟ್ಟಿದೆ.

ಅ.ಸಂ.ಸಂ. ಸೇನಾ ಪಡೆಗಳ ನೆಲೆಯನ್ನು 'ಅನಿರ್ದಿಷ್ಟ ಅವಧಿ'ಯವರೆಗೆ ಉಳಿಸಿಕೊಳ್ಳಲು ಸಮ್ಮತಿಸುವುದಾದರೆ, ಈಗಿನ ಒಪ್ಪಂದದ ಅವಧಿಗಿಂತ 10 ವರ್ಷ ಮೊದಲೇ (ಅಂದರೆ 1990ರ ಹೊತ್ತಿಗೆ) ಕಾಲುವೆಯನ್ನು ಪನಾಮಕ್ಕೆಬಿಟ್ಟುಕೊಡುವುದು ಹೊಸ 'ಅನಧಿಕೃತ' ಸೂಚನೆಯ ಸಾರ. ಅಟ್ಲಾಂಟಿಕ್ ಮತ್ತು ಶಾಂತ ಸಾಗರಗಳಿಗೆ ಕೀಲಿಕೈನಂತಿರುವ ಪನಾಮ ಕಾಲುವೆಯಲ್ಲಿ ಸಶಸ್ತ್ರ ಅಸ್ತಿತ್ವದ ಮಿಲಿಟರಿ ರಾಜಕೀಯ ಮಹತ್ವ ತಿಳಿಯಲು ಮಿಲಿಟರಿ ತಜ್ಞರೇ ಬೇಕಾಗಿಲ್ಲ.

ಈ ಹೊಸ ಸಲಹೆ ಪನಾಮ ಸರಕಾರ ಮತ್ತು ಜನತೆಗೆ ಒಡ್ಡಿರುವ ಅಮಿಷ-ಎಂಬ ಭಾವನೆ ಪನಾಮದಲ್ಲಿ ಜನಜನಿತವಾಗಿದೆ. ಮಿಲಿಟರಿ ನೆಲೆಗಳನ್ನು ಉಳಿಸಿಕೊಂಡ ಮೇಲೆ ಪನಾಮಕ್ಕೆ ಕಾಲುವೆಯ ಪರಮಾಧಿಕಾರ ಬರಿಯ ಔಪಚಾರಿಕ ಎಂಬುದು ಪನಾಮದ ದೇಶ ಪ್ರೇಮಿ ಶಕ್ತಿಗಳಿಗೆ ಸ್ಪಷ್ಟವಾಗಿದೆ. ಪನಾಮದ ರಾಜಕೀಯ ಸ್ಥಿರತೆಗೆ ಅಪಾಯ ಒಡ್ಡಲು, ಕ್ರಮೇಣ ಆ ದೇಶದ ವಿದೇಶಿ ನೀತಿ ತನ್ನ ಅನುಕೂಲಕ್ಕೆ ಬದಲಾಯಿಸಲು, ಅಗತ್ಯ ಬಿದ್ದರೆ ಈಗಿನ ಸರ್ಕಾರವನ್ನುರುಳಿಸಿ ಕೈಗೊಂಬೆ ಸರ್ಕಾರ ಸ್ಥಾಪಿಸಲು ಮಿಲಿಟರಿ ನೆಲೆಗಳು ಅತ್ಯವಶ್ಯ.

ಪನಾಮದ ದೇಶ ಪ್ರೇಮಿ ಶಕ್ತಿಗಳು ಮೊದಲಿನಿಂದಲೂ ಕಾಲುವೆಯ ಮೇಲೆ ತನ್ನ ಸಾರ್ವಭೌಮತ್ವಕ್ಕಾಗಿ ಹೋರಾಟ ನಡೆಸುತ್ತಾ ಬಂದಿವೆ. ಕಾಲುವೆಯ ಮೇಲೆ ಹತೋಟಿ ಸ್ಥಾಪಿಸಲು, ಕುತಂತ್ರಕಾರಿ ಶರತ್ತುಗಳಿಗೆ ಒಪ್ಪುವ ಅವಶ್ಯಕತೆ ಇಲ್ಲದ ಪರಿಸ್ಥಿತಿ ನಿರ್ಮಾಣ ಮಾಡಲು ಹೋರಾಟ ನಡೆದಿದೆ.

'ಕಾನಿಷ್ಕ' ಕುಖ್ಯಾತಿಯ ಕ್ಯಾಂಪರೆಗೆ ಶಿಕ್ಷೆ

'ಕೂಲಿ' ಸೈನಿಕರನ್ನು ಭಯೋತ್ಪಾದಕ ಚಟುವಟಿಕೆಗಾಗಿ ತರಬೇತಿ ನೀಡುವ ಸ್ಕೂಲನ್ನು ರಾಜಾರೋಷವಾಗಿ ನಡೆಸುತ್ತಿದ್ದ ಫ್ರಾಂಕ್ ಕ್ಯಾಂಪರ್‌ಗೆ 14 ವರ್ಷ ಸಜೆ ವಿಧಿಸಲಾಗಿದೆ. ಈತ ಮತ್ತು ಸಹಾಯಕ ಪಾಲ್ ಜಾನ್ಸನ್ 'ಕಾನಿಷ್ಕ' ಏರ್-ಇಂಡಿಯಾ ವಿಮಾನ ಸ್ಫೋಟಕ್ಕೆ ಮತ್ತು ರಾಜೀವ್‌ಗಾಂಧಿಯವರ ಕೊಲೆ ಪ್ರಯತ್ನಕ್ಕೆ ಸಿಖ್ ಉಗ್ರಗಾಮಿಗಳನ್ನು ತರಬೇತಿ ನೀಡಿದ್ದರೆಂದು ವರದಿಯಾಗಿತ್ತು. ಆದರೆ ಶಿಕ್ಷೆಯಾಗಿರುವುದು, ಒಂದು ಶಾಲೆಯ ವ್ಯವಸ್ಥಾಪಕ ವರ್ಗದ ಅಪೇಕ್ಷೆಯ ಮೇರೆಗೆ, ಆ ಶಾಲೆಯ ಎರಡು ಶಿಕ್ಷಕರ ಕಾರುಗಳನ್ನು ಸ್ಫೋಟಿಸುವಲ್ಲಿ ಭಾಗಿಯಾಗಿದ್ದ ಅಪರಾಧಕ್ಕೆ.

ಅದೂ ಪಾಲ್ ಜಾನ್ಸನ್, ಕ್ಯಾಂಪರ್ ವಿರುದ್ಧ ಸಾಕ್ಷ್ಯ ನೀಡಿದ್ದರಿಂದ. ತನ್ನ ಆಪ್ತ ಸಹಾಯಕನ ಈ 'ವಿಶ್ವಾಸಘಾತ'ದಿಂದ ಕುಪಿತನಾದ ಕ್ಯಾಂಪರ್ FBI ಮೇಲೆ(ಅ.ಸಂ.ಸಂ.ದ ಆಂತರಿಕ ಗೂಢಾಚರ್ಯ ಸಂಸ್ಥೆ) ಹಲವು ಗುರುತರ ಆಪಾದನೆಗಳನ್ನು ಮಾಡಿದ್ದಾನೆ. ರಾಜೀವ್‌ಗಾಂಧಿಯವರನ್ನು ಕೊಂದು, ಭಾರತ ಸರ್ಕಾರ ಉರುಳಿಸುವಲ್ಲಿ ಸಿಖ್ ಉಗ್ರಗಾಮಿಗಳಿಗೆ ಸಹಾಯ ನೀಡುವ ಗುಪ್ತ ಯೋಜನೆಯ ಬಗ್ಗೆ ತನಗೆ ಮಾಹಿತಿ ಇರುವುದರಿಂದ, ಜಾನ್ಸನ್ ಬಳಸಿ ತನ್ನನ್ನು ಜೈಲಿಗೆ ಅಟ್ಟುವ ಕುತಂತ್ರ ನಡೆದಿದೆ, ಎಂಬುದು ಇದರಲ್ಲೊಂದು.

(2ನೇ ಪುಟದಿಂದ)

ಈ ವರ್ಷ 1ಕೋಟಿ ಸದಸ್ಯತ್ವದ ಭರ್ತಿ ಮಾಡಬೇಕೆಂದು ಅಖಿಲ ಭಾರತ ಕಿಸಾನ್ ಸಭೆಯು ತೀರ್ಮಾನ ಮಾಡಿತು. ಒಂದು ತಿಂಗಳ ಕಾಲವನ್ನು ಇತ್ತೀಚೆಗೆ ಕಟಕ್‌ನಲ್ಲಿ ಸದಸ್ಯತ್ವ ನೋಂದಾಯಿಸುದಕ್ಕೆ ಅನುಕೂಲವಾಗುವಂತೆ ವಿಸ್ತರಿಸಲಾಯಿತು. ಪಶ್ಚಿಮ ಬಂಗಾಳದಲ್ಲಿ ಪ್ರಬಲವಾದ ವೈರಿಗಳ ವಿರುದ್ಧ ಪ್ರಬಲವಾದ ಚುನಾವಣಾ ಹೋರಾಟವನ್ನು ಸಂಘಟಿಸುವ ಸಂದರ್ಭದಲ್ಲೇ, ಪಶ್ಚಿಮ ಬಂಗಾಳದ ರೈತ ಸಂಘದ ಘಟಕಗಳು ತಮ್ಮ 70ಲಕ್ಷ ಸದಸ್ಯತ್ವದ ಕೋಟಾವನ್ನು ಭರ್ತಿ ಮಾಡಿ ಎಲ್ಲರಿಗೂ ಕ್ರಾಂತಿಕಾರಿ ಅವಶ್ಯವನ್ನು ಮಾಡಿ ತೋರಿಸಿ ಮುಂದಿಟ್ಟಿದ್ದಾರೆ. ಏಕ ಕಾಲದಲ್ಲಿ ಈ ಎರಡು ಮಹತ್ವದ ಕಾರ್ಯಗಳನ್ನು ಸಂಘಟಿಸಿ ಒಂದು ಇನ್ನೊಂದನ್ನು ಬಿಟ್ಟಿಲ್ಲ. ಒಂದು ಇನ್ನೊಂದಕ್ಕೆ ಪೂರಕವಾಗಿದೆ ಎಂದು ತೋರಿಸಿಕೊಟ್ಟಿದ್ದಾರೆ. ತಮ್ಮ ಸಂಘಟನಾ ಕಾರ್ಯವನ್ನು ಪ್ರಕಟಿಸಿದ್ದಾರೆ. ಪಶ್ಚಿಮ ಬಂಗಾಳದ ನಮ್ಮ ಘಟಕವನ್ನು ಎಷ್ಟು ಕೊಂಡಾಡಿದರೂ ಸಾಲದು.

ಕರ್ನಾಟಕದಲ್ಲಿ ನಿಮ್ಮ ವರದಿ ಪ್ರಕಾರವೇ ನವಂಬರ್‌ದಿಂದ ಫೆಬ್ರವರಿವರೆಗೆ ನಿಮ್ಮ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಚುನಾವಣಾ ಹೋರಾಟ ಮತ್ತು ಅನಂತರದ ಸೋಲಿನಿಂದ ಉಂಟಾದ ಉತ್ಸಾಹರಹಿತ ವಾತಾವರಣದಿಂದಾಗಿ ನಿಮ್ಮ ಸದಸ್ಯತ್ವದ ಕಾರ್ಯವು ಬಹಳ ಹಿಂದೆ ಬಿದ್ದಿದೆ ಎಂದು ತಿಳಿದು ಬರುತ್ತದೆ. ಇದು ಸಲ್ಲದು. ಚುನಾವಣೆಯ ಜಯಪಜಯ ನಮ್ಮನ್ನು ಧೃತಿಕೆಡಿಸಬಾರದು. ಸುಮಾರು 30 ಸಾವಿರ ಸದಸ್ಯತ್ವವು 1986-87ರಲ್ಲಿ ಕಡಿಮೆಯಾದುದನ್ನು ನೋಡಿದರೆ ಇನ್ನೂ ಸಂಘಟನೆಯ ಬಗ್ಗೆ ಸದಾ ಕಾಳಜಿ ಇನ್ನೂ ನಿಮ್ಮಲ್ಲಿ ಧೃಡವಾಗಿಲ್ಲದಿರುವುದು ಸ್ಪಷ್ಟವಾಗುತ್ತಿದೆ. ಈ ದೋಷವನ್ನು ಕೂಡಲೇ ನೀವು ಸರಿಪಡಿಸಿಕೊಳ್ಳಬೇಕು. ಸಂಘಟನೆಯನ್ನೂ ಒಮ್ಮೆಲೆ ಮೇಲಿನಿಂದ ಕೆಳಗೆ ಎಲ್ಲವನ್ನೂ ಸರಿಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಕೇಂದ್ರದ ನಮ್ಮ ಅನುಭವದ ಆಧಾರದಲ್ಲಿ ಸೂಚನೆ ಕೊಡುವುದು; ನೀವು ಮೊದಲು ರಾಜ್ಯಕೇಂದ್ರವನ್ನೂ, ಜಿಲ್ಲಾ ಕೇಂದ್ರಗಳನ್ನೂ ಬಲಪಡಿಸಲು, ಅವುಗಳ ಕೆಲಸ ಕಾರ್ಯಗಳು ಸುಸೂತ್ರವಾಗುವಂತೆಯೂ, ಅಲ್ಲಿ ಎಲ್ಲಾ ಸಮಸ್ಯೆಗಳು ಪ್ರಜಾಸತ್ತಾತ್ಮಕ ಚರ್ಚೆಯಾಗಿ ಕೊಂಡೊಯ್ಯುವಾಗುವಂತೆಯೂ ಕ್ರಮ ತೆಗೆದುಕೊಳ್ಳುವಂತೆ ಪ್ರಯತ್ನ ನಡೆಸಿರಿ.

ರಾಜ್ಯ ಕೇಂದ್ರಗಳಲ್ಲೂ, ಜಿಲ್ಲಾ ಕೇಂದ್ರಗಳಲ್ಲೂ ಒಂದು ಮುಂದಾಳುಗಳ ಟೀಮು ಕೆಲಸಮಾಡುವಂತಾಗಲಿ.

ರಾಜ್ಯ ಕೇಂದ್ರದಲ್ಲಿ ಸದಾ ಕಾಲ 3-4 ಮಂದಿಯಾದರೂ ಜವಾಬ್ದಾರಿಯುತ ಮುಂದಾಳುಗಳು ಕಾರ್ಯಕರ್ತರು ಕೇಂದ್ರದ ಕೆಲಸಕ್ಕೆ ಗಮನ ಕೊಡುವಂತಿರಬೇಕು.

ಒಂದು ಭಾಗದಲ್ಲಿ ತಮಿಳುನಾಡು, ಇನ್ನೊಂದು ಭಾಗದಲ್ಲಿ ಆಂಧ್ರ ಪ್ರದೇಶದಲ್ಲಿ ಅಖಿಲ ಭಾರತ ಕಿಸಾನ್ ಸಭಾ ಹೋರಾಟಗಳು ಪ್ರಬಲವಾಗಿ ಜನಪ್ರಿಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಬಲಿಷ್ಠವಾದ ಸಂಘಟನೆಯಾಗಿ ಬೆಳೆಯುತ್ತಿರುವಾಗ ಕರ್ನಾಟಕದಲ್ಲೂ ಬೆಳೆಯಲು ಅನುಕೂಲಕರ ಪರಿಸ್ಥಿತಿ ಇದೆ. ಸರ್ವಾಧಿಕಾರಿ ಶಕ್ತಿಗಳನ್ನು ಎದುರಿಸುವ ವೇಳೆ ಜೊತೆಯಾಗಿ, ಜನತೆಯ ವಿರುದ್ಧ ಧೋರಣೆಗಳನ್ನು ಅನುಸರಿಸುವ ಜನತಾ ಪಕ್ಷದ ರಾಜ್ಯ ಸರ್ಕಾರದ ವಿರುದ್ಧ ಹೋರಾಡುತ್ತಾ, ಹೋದರೆ ನೀವು ಕರ್ನಾಟಕದಲ್ಲೂ ಬಲಿಷ್ಠ ಕಿಸಾನ್ ಸಭಾ ಕಟ್ಟಲು ಸಾಧ್ಯ ಎಂಬುದರಲ್ಲಿ ಎರಡು ಮಾತಿಲ್ಲ.

REG No. BGW-148 MAG (2) PRB DECR 319/78-79

ಕರ್ನಾಟಕ ರಾಜ್ಯದಲ್ಲಿ....

ಜನತಾ ಪಕ್ಷದ ವರ್ಚಸ್ಸಿಗೆ ಕುಂದು

ಹೋದ ವಾರ ನಡೆದ ಜನತಾ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಭ್ರಷ್ಟಾಚಾರ, ಮಂತ್ರಿಗಳ ವರ್ತನೆಗಳ ಕುರಿತು ಭೀಕರ ಆಕ್ರೋಶ ಕೇಳಿದ ನಂತರ ತಮ್ಮ ಕಿವಿ ಚಿಗುರಿಸಿಕೊಂಡ ಮುಖ್ಯ ಮಂತ್ರಿ ಹೆಗಡೆಯವರು ಕಳೆದ 30 ತಿಂಗಳಿಂದ ತಮ್ಮ ಪಕ್ಷಕ್ಕೂ ಸರಕಾರಕ್ಕೂ ಕುಂದುಟಾಗಿದೆಂಬುದನ್ನು ಒಪ್ಪಿಕೊಂಡರು. ಆದಕ್ಕೆಲ್ಲ ತೆರಿಗೆ ಹೊರೆ, ಆರ್ಥಿಕ ಮುಗ್ಗಟ್ಟು ಹಾಗೆಯೇ 2-3 ತಿಂಗಳಿಂದ ಕಾಂಗ್ರೈ ಪಕ್ಷ ನಡೆಸಿರುವ ಅಪಪ್ರಚಾರವೇ ಕಾರಣವೆಂದು ಆರೋಪಿಸಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೈ ಪಕ್ಷದ ಅಪಪ್ರಚಾರ ಬರೇ ಮೂರೇ ತಿಂಗಳಷ್ಟೆ. ಅದು ಕೂಡ ಬರೇ ಥೋಟಾ ಮುಖಂಡರಿಂದ. ಆದರೆ ಕಳೆದ 10 ವರ್ಷಗಳಿಂದಲೂ ಪಶ್ಚಿಮಬಂಗಾಲ-ತ್ರಿಪುರಾದಲ್ಲಿ ಕಾಂಗ್ರೈಯ ಅಥಿರಥ ಮಹಾರಥರೆಲ್ಲಾ, ಸಾವಿರ ಸಾವಿರ ಕೋಟಿ ರೂಪಾಯಿಯ ಆಸೆ ತೋರಿಸಿ, ಸಿ.ಪಿ.ಐ. (ಎಂ) ಸರ್ಕಾರವನ್ನು ಸಮುದ್ರಕ್ಕೆಸೆಯಬೇಕೆಂದು ಹೇಳಿಅತೀ ಕೆಳಮಟ್ಟದ ಬಿರುಸು ಅಪಪ್ರಚಾರ ಮಾಡಿದರೂ ಕೂಡ ತಮ್ಮ ಪಕ್ಷದ ಅಥವಾ ಸರ್ಕಾರದ ಪ್ರಭಾವ ಕುಗ್ಗಿದೆಂದು ಜ್ಯೋತಿ ಬಸುವಾಗಲೀ, ನೃಪೇನ್‌ಚಕ್ರವರ್ತಿಯಾಗಲೀ ದೂರಿಕೊಂಡಿಲ್ಲವಲ್ಲ. ಯಾಕೆ ಗೊತ್ತೆ? ರಾಜ್ಯಗಳ ಆರ್ಥಿಕ ಬಿಕ್ಕಟ್ಟಿಗೆ, ಅಭಿವೃದ್ಧಿ ಯೋಜನೆಗಳ ಹಿಂದೇಟಿಗೆ ಕೇಂದ್ರ ಸರಕಾರವೇ ಮುಖ್ಯ ಕಾರಣ. ಸಂಪನ್ಮೂಲಗಳನ್ನು ಸರಿಯಾಗಿ ವಿತರಣೆ ಮಾಡದೇ ಕೇಂದ್ರ-ರಾಜ್ಯ ಸಂಬಂಧ ಸರಿಪಡಿಸದೆ, ಕೇಂದ್ರ ರಾಜ್ಯಗಳನ್ನು ಬಡವಾಗಿರಿಸಿದೆ ಎಂಬ ನಿಜಾಂಶದ ಕುರಿತು ಜನರ ಮಧ್ಯೆ ತೀವ್ರ ಪ್ರಚಾರ ಮಾಡಿ ರಾಜಕೀಯ ಜಾಗೃತಿ ಗೊಳಿಸಿದ ಕಾರಣದಿಂದಾಗಿಯೇ ಕಾಂಗ್ರೈ ಶಕ್ತಿ ಕುಗ್ಗಿಸಿ, ಸಿ.ಪಿ.ಐ.(ಎಂ) ಮತ್ತು ಎಡ ಪಕ್ಷಗಳ ಪ್ರಭಾವ ಬೆಳೆಸಲು ಸಾಧ್ಯವಾಗಿದೆ. ಕೇಂದ್ರದ ವಿರುದ್ಧ ನಿಖರವಾದ ಹೋರಾಟ ನಡೆಸದೆ ಹೆಗಡೆಯವರ ಅನಿಶ್ಚಿತ ರಾಜಕೀಯ ನಿಲುವೆಯಿಂದಾಗಿ ಕಾಂಗ್ರೈಯ ಮೂರು ತಿಂಗಳ ಅಪಪ್ರಚಾರದಿಂದಲೇ ಜನತಾ ಸರ್ಕಾರ ತತ್ತರಿಸುತ್ತದೆಂದರೆ ನಾಚಿಕೆಗೇಡಲ್ಲವೇ ? ಕಾಂಗ್ರೈಯನ್ನು ಅಳಿಸಲು ಪಣ ತೊಟ್ಟ ಜನತಾ ಪಕ್ಷ ಪ.ಬಂಗಾಲ ತ್ರಿಪುರಾಗಳಿಂದ ಎಳ್ಳಷ್ಟಾದರೂ ಪಾಠ ಕಲಿಯಬಾರದೇ ?

ಆಟದ ಬೈಲುಗಳ ಪ್ರಶ್ನೆ

ಬಿಡಾಡಿ ದನಗಳನ್ನು ಹಿಡಿದು ಹಾಕುವ ಕೊಂಡವಾಡೆಗಳ ಹಾಗಿವೆ ನಮ್ಮ ಪ್ರಾಥಮಿಕ ಶಾಲೆಗಳು. ಬೆಳಕು-ಗಾಳಿಯ ಗಂಧ ಸೋಂಕವೆ ಮಳೆಯಾದರೆ ಎಲ್ಲಿ ತಲೆಯ ಮೇಲೆ ಬೀಳುತ್ತದೋ ಎಂಬ ಅಂಜಿಕೆಯಿಂದಲೇ ಮಕ್ಕಳಿಗೆ ಪಾಠ ಕಲಿಸಲಾಗುತ್ತಿದೆ. ಮಕ್ಕಳಿಗೆ ಸರಿಯಾದ ಶಾಲೆಯವ್ಯವಸ್ಥೆ ಮಾಡುವುದರಲ್ಲಿ ವಿಫಲಗೊಂಡ ಕರ್ನಾಟಕ ಸರ್ಕಾರ ಆಟದ ಬೈಲಿನ ಕಡೆ ಗಮನ ಹರಿಸುತ್ತದೆಯೇ, ?

ಕೇಂದ್ರ ಸರ್ಕಾರದ ಸಹಾಯದಿಂದ ನಿರ್ಮಿಸಲ್ಪಡುವ ರಿಪೇರಿಮಾಡಲ್ಪಡುವ ಆಟದ ಬೈಲು ಮತ್ತು ಸ್ಟೇಡಿಯಂಗಳ ಕುರಿತು ರಾಜ್ಯ ಸರ್ಕಾರ ಕಿಂಚಿತ್ತೂ ಆಸ್ತೆವಹಿಸುತ್ತಿಲ್ಲೆಂದು ತನ್ನ ಪಕ್ಷದ ಸರಕಾರದ ಮೇಲೆ ಆರೋಪ ಹೊರಿಸಿದವರು ಲೋಕ ಸಭಾ ಸದಸ್ಯರಾದ ವಿ. ಎಸ್. ಕೃಷ್ಣಐಯ್ಯರ್. ಹೋದವಾರ ಬೆಂಗಳೂರಿನಲ್ಲಿ ಭಾಷಣ ಮಾಡುತ್ತಾ ಕೇಂದ್ರ ಸರ್ಕಾರ ಆರ್ಥಿಕ ಸಹಾಯ ಕೊಡುತ್ತೇನೆಂದು ಹೇಳಿದರೂ ಕೂಡ ರಾಜ್ಯ ಸರ್ಕಾರ ಆಟದ ಬಯಲು ಸ್ಟೇಡಿಯಂಗಳ ನಿರ್ಮಾಣಕ್ಕೆ ಯೋಜನೆಗಳನ್ನು ಹಾಕಿಕೊಂಡಿಲ್ಲೆಂದು ವಿಷಾದಿಸಿದರು.

ಕಾಂಗ್ರೈನಿಂದ ವಿ. ಪಿ. ಸಿಂಗ್ ಮೊದಲಾದವರ ಉಚ್ಚಾಟನೆಯಿಂದಾಗಿ ಡಿಲ್ಲಿಯೇ ರಾಜಕೀಯ ಆಟದ ಬಯಲಾದಾಗ ಮಕ್ಕಳ ಗತಿಯೇನಯ್ಯಾ ?

– ಎನ್ಕೆ

ಲೋಕಸಭೆಗೆ ಮಧ್ಯಂತರ ಚುನಾವಣೆ ನಡೆಸಿ

(1ನೇ ಪುಟದಿಂದ)

ಕಾನೂನು ಸುವ್ಯವಸ್ಥೆಯ ಸಮಸ್ಯೆಗಳು ಬಿಗಡಾಯಿಸುತ್ತಿವೆ.

ದೇಶದಲ್ಲಿ ಉದ್ಭವಿಸುತ್ತಿರುವ ಸಮಸ್ಯೆಗಳನ್ನು ರಾಜಕೀಯವಾಗಿ ಪರಿಹರಿಸುವುದಕ್ಕೆ ಬದಲಾಗಿ ಕಾನೂನು ಕ್ರಮದಿಂದಲೇ ಪರಿಹರಿಸಲು ಪ್ರಯತ್ನಪಡುತ್ತಿರುವುದರ ಫಲ ಇದು.

ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ನಮ್ಮ ದೇಶದ ಐಕ್ಯತೆ ಹಾಗೂ ಸಮಗ್ರತೆಯಲ್ಲಿ ಸುರಂಗಗಳನ್ನು ಕೊರೆಯಲು ಸಾಮ್ರಾಜ್ಯಶಾಹಿಗೆ ಅವಕಾಶ ಮಾಡಿಕೊಟ್ಟಿದೆಈ ನೀತಿ. ಈ ಸವಾಲನ್ನು ಎದುರಿಸಲು ಭಾರತ ಜನತೆಯನ್ನು ಇಂದು ಒಗ್ಗೂಡಿಸುವುದು ಅತ್ಯವಶ್ಯಕವಾಗಿದೆ.

ರಾಜೀವಗಾಂಧಿ ಸರ್ಕಾರಕ್ಕೆ ಈ ಗುರುತರ ಜವಾಬ್ದಾರಿಯನ್ನು ಹೊರಲು ಸಾಧ್ಯವಿಲ್ಲವೆಂದು ಜನರಿಗೀಗ ಮನವರಿಕೆಯಾಗಿದೆ. ಆದುದರಿಂದ ಮಧ್ಯಂತರ ಚುನಾವಣೆಇಂದಿನ ಅಶ್ಯಕತೆಯಾಗಿದೆ. ಇಂದು ದೇಶ ಮತ್ತು ಕಾಂಗ್ರೆಸ್ [ಐ] ಪಕ್ಷ ಎದುರಿಸುತ್ತಿರುವ ಬಿಕ್ಕಟ್ಟಿಗೆ ಪರಿಹಾರವನ್ನು ಪ್ರಜಾಸತ್ತಾತ್ಮಕ ದಾರಿಯಲ್ಲಿಯೇ ಹುಡುಕಬೇಕಾಗಿದೆ. ಈ ಕಾರಣಕ್ಕಾಗಿಯೇ ರಾಜೀವ್‌ಗಾಂಧಿಯವರು ಕುರ್ಚಿಗೆ ಕಚ್ಚಿಕೊಂಡು ಕುಳಿತುಕೊಳ್ಳುವುದಕ್ಕೆ ಬದಲಾಗಿ ಹೊಸತಾಗಿ ಜನತೆಯ ತೀರ್ಮಾನವನ್ನು ಪಡೆಯಲಿ ಎಂದು ಪಕ್ಷ ಒತ್ತಾಯಿಸಿದೆ.

ಈ ವಾರ....

★ ಒಂದು ಕಡೆ ಕಾಂಗ್ರೈನ ಜನಾರ್ದನ ಪೂಜಾರಿಯವರು 'ಸಾಲ ಮೇಳ' ನಡೆಸಿದರೆ ಇನ್ನೊಂದು ಕಡೆ ಹೆಗಡೆಯವರು 'ಸೈಟ್ ಮೇಳ' ಶುರುಮಾಡಿದ್ದಾರೆ. ಈ ಮೇಳದಲ್ಲಿ ಸೈಟ್ ಪಡೆದವರು ನಿರ್ಗತಿಕರೇ ? ಸೈಟ್ ಪಡೆದಿರುವರು. ಈಗಾಗಲೇ ಹಲವಾರು ಸೈಟ್‌ಗಳನ್ನು ಹೊಂದಿದ್ದಾರೆ.

—ಲಂಕೇಶ್ ಪತ್ರಿಕೆ, ಜುಲೈ 19.

ಕೈಗೆ ಸಿಗದ ದ್ರಾಕ್ಷಿ ಹುಳಿ

★ ರಾಷ್ಟ್ರಪತಿ ಆಗಲು ಸ್ಪರ್ಧಿಸಿದ್ದರೆ ತಮ್ಮನ್ನು ಸೋಲಿಸಲು ಯಾರಿಗೂ ಆಗುತ್ತಿರಲಿಲ್ಲ. ಕಮ್ಯುನಿಸ್ಟರು ಮತ್ತು ಕಾಂಗ್ರೆಸ್ಸಿಗರು ಬಹಿರಂಗವಾಗಿ ಬೆಂಬಲ ವ್ಯಕ್ತಪಡಿಸದಿದ್ದರೂ ನಾನು ಗೆಲ್ಲುತ್ತಿದ್ದೆ.ತಾತ್ವಿಕ ಕಾರಣದಿಂದ ನಾನು ಸ್ಪರ್ಧಿಸ ಬಯಸಲಿಲ್ಲ.

—ಜೇಲ್‌ಸಿಂಗ್, ಇಲಸ್ಟ್ರೇಟೆಡ್‌ವೀಕ್ಲಿಯಲ್ಲಿ.

★ ವಿ.ಪಿ. ಸಿಂಗ್‌ರನ್ನು ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಇಂದು ಕಾಂಗ್ರೈನಿಂದ ಹೊರಹಾಕಲಾಯಿತು. ಷರತ್ತಿನ ಮೇಲೆ ರಾಜೀನಾಮೆಯನ್ನು ಪಕ್ಷದ ವರಿಷ್ಟ ಮಂಡಳಿ ತಿರಸ್ಕರಿಸಿದ ಎರಡು ದಿನದೊಳಗೆ ಸಿಂಗ್ ಅವರನ್ನು ಉಚ್ಚಾಟಿಸಲಾಗಿದೆ.

—ಡೆಕ್ಕನ್‌ಹೆರಾಲ್ಡ್, ಜುಲೈ 20.

★ ಹಿಂದಿನ ದಿನವಷ್ಟೇ ನಾನು ಪಕ್ಷ ವಿರೋಧಿ ಕೃತ್ಯ ನಡೆಸುತ್ತಿಲ್ಲ ಎಂದು ಹೇಳಿದವರು ಮರುದಿನವೇ ಈ ಕ್ರಮ ಕೈಗೊಂಡಿರುವುದು ಆಶ್ಚರ್ಯ ತಂದಿದೆ.

—ವಿ.ಪಿ. ಸಿಂಗ್ ಡೆಕ್ಕನ್‌ಹೆರಾಲ್ಡ್ ಜುಲೈ 20.

★ ವಿದೇಶಿ ವಿನಿಮಯ ನಿಯಂತ್ರಣ ಕಾನೂನು ಉಲ್ಲಂಘಿಸಿ ಸ್ವಿಡ್ಜರ್‌ಲ್ಯಾಂಡಿನಲ್ಲಿ ದುಬಾರಿ ಬೆಲೆಯ ಆಸ್ತಿ-ಪಾಸ್ತಿ ಹೊಂದಿರುವ ಅಜಿತಾಬ್ ಬಚ್ಚನ್‌ರವರ ವಿರುದ್ಧ ಸಮಗ್ರ ತನಿಖೆ ನಡೆಸಲು ಕೇಂದ್ರ ಸರ್ಕಾರ ತುರ್ತು ಆಜ್ಞೆ ಮಾಡಿದೆ.

—ಯು.ಎನ್.ಐ., ಪಿ.ಟಿ.ಐ. ಜುಲೈ 20.

★ ಬಾಟ್ಲಿಂಗ್ ಹಗರಣದ ಮೂಲ ಹೊಣೆಗಾರಿಕೆ ಯಾರದು ? ಗ್ರೀನ್‌ಬೆಲ್ಟ್‌ಹಗರಣದ ವಿಚಾರ ಮುಖ್ಯಮಂತ್ರಿಗಳ ಗಮನಕ್ಕೆ ಬಾರದೆಯೇ ನಡೆದು ಹೋಯಿತೆ ? ಈ ಖೋಡೆಗಳಿಗೆ ಮಣಿ ಹಾಕುತ್ತಿರುವವರು ಯಾರು ?

—ಹೆಗಡೆಗೆ ಭಿನ್ನಮತೀಯ ಶಾಸಕರ ಸವಾಲು.

★ ರಕ್ಷಣಾ ಖಾತೆ ರಾಜ್ಯ ಸಚಿವ ಅರುಣ್ ಸಿಂಗ್ ಕೇಂದ್ರ ಸಂಪುಟಕ್ಕೆರಾಜೀನಾಮೆ ನೀಡಿದ್ದಾರೆ. ಪ್ರಧಾನಿ ರಾಜೀವ್ ಗಾಂಧಿಯವರ ಆಪ್ತ ಮಿತ್ರರಲ್ಲಿ ಒಬ್ಬರಾದ ಅರುಣ್ ಸಿಂಗ್ ಬೋಫೋರ್ಸ್ ಹಗರಣಕ್ಕೆ ಸಂಬಂಧಿಸಿ ಪ್ರಧಾನಿ ಜೊತೆ ಭಿನ್ನಾಭಿಪ್ರಾಯ ತಳೆದದ್ದು ರಾಜೀನಾಮೆಗೆ ಕಾರಣ ಎನ್ನಲಾಗಿದೆ.

—ಪ್ರಜಾವಾಣಿ, ಜುಲೈ 19.

ಅಧ್ಯಕ್ಷೀಯ ಚುನಾವಣೆಯ ನಂತರ

[1ನೇ ಪುಟದಿಂದ]

ಎರಡೂ ಅನ್ಯಾಯಗಳ ವಿರುದ್ಧ ನೀತಿಯುತ ಹೋರಾಟದ ಫಲವೇ ವಿರೋಧ ಪಕ್ಷಗಳ ಸಾಮಾನ್ಯ ಅಭ್ಯರ್ಥಿ ಶ್ರೀ ಕೃಷ್ಣ ಐಯ್ಯರ್. ಇದಕ್ಕಾಗಿ ಎಡ ಪಕ್ಷಗಳು ಬಿ. ಜೆ. ಪಿ. ಯ ಕೋಪಕ್ಕೆ ಗುರಿಯಾಗಬೇಕಾಯಿತು. ಶ್ರೀ ಕೃಷ್ಣ ಐಯ್ಯರ್‌ಗೆ ಬರೆದ ಪತ್ರದಲ್ಲಿ ಶ್ರೀ ಅದ್ವಾನಿ 'ವಿದೇಶ ಶಕ್ತಿಗಳ ಕೈಗೊಂಬೆಯಾಗಿ ಎರಡು ಕಮ್ಯುನಿಸ್ಟ್ ಪಕ್ಷಗಳ ಪಾತ್ರವನ್ನು ಬಯಲಿಗೆಳೆಯಲು'ತಮ್ಮ ಪಕ್ಷ ಚುನಾವಣೆಯಲ್ಲಿ ಭಾಗವಹಿಸಲಿಲ್ಲ ಎಂದು ಹೇಳಿಕೊಂಡಿದ್ದಾರೆ.

ಶ್ರೀ ಅದ್ವಾನಿಯವರ ಪತ್ರದ ಸಾರವೇ, ಇತ್ತೀಚೆಗೆ ಹಲವಾರು ಗುತ್ತೇದಾರಿ ಬೂರ್ಜ್ವಾ ಪತ್ರಿಕೆಗಳಲ್ಲಿ ಒಂದು 'ಸಂಘಟಿತ ಅಪಪ್ರಚಾರ' ವೋ ಎಂಬ ಭಾವನೆಗೆಡೆಗೊಟ್ಟ ಕಮ್ಯೂನಿಸ್ಟ ವಿರೋಧಿ ಸಂಪಾದಕೀಯಗಳು, ಲೇಖನಗಳ ಸಾರಾಂಶ. ಇದನ್ನೆ ಕೆಲವು ವಿರೋಧಿ ನಾಯಕರು ತಮ್ಮ ಭಾಷಣಗಳಲ್ಲಿ ಪ್ರತಿಧ್ವನಿಸಿದ್ದಾರೆ. ಈ ಅಪಪ್ರಚಾರ ಮುಖ್ಯವಾಗಿ ಕಮ್ಯೂನಿಸ್ಟ ಪಕ್ಷಗಳು ಜೈಲ್‌ಸಿಂಗ್‌ರು ವಿರೋಧ ಪಕ್ಷದ ಅಭ್ಯರ್ಥಿಯಾಗಲು ವಿರೋಧಿಸಿದರು ಎಂಬ ಕಾರಣಕ್ಕೆ. ಆದರೆ ಈ ಆಪಾದನೆಯ ಹಿಂದೆ ಎರಡು ಅಂಶಗಳು ನಡೆದಿವೆ ಎಂದು ನಂಬಲಾಗಿದೆ. ಒಂದನೆಯದಾಗಿ, ಶ್ರೀ ಜೈಲ್ ಸಿಂಗ್ ವಿರೋಧ ಪಕ್ಷ ಅಭ್ಯರ್ಥಿಯಾಗಲು ಒಪ್ಪಿದ್ದರು ಎಂಬುದು. ಎರಡನೆಯದಾಗಿ, 150-200 ಕಾಂಗ್ರೆಸ್ (ಐ) ಎಂ.ಪಿ.ಗಳು ಅವರಿಗೆ ಬೆಂಬಲ ನೀಡಲು ತಯಾರಾಗಿದ್ದರೆಂಬುದು. ಇವೆರಡೂ ನಿಜವಲ್ಲ ಎಂದು ಈಗ ಸ್ಪಷ್ಟವಾಗಿದೆ.

ವಿರೋಧ ಪಕ್ಷಗಳು ನೇಮಿಸಿದ ಮೂವರು ಸಮಿತಿ ಜೈಲ್ ಸಿಂಗರ ಹೆಸರನ್ನು ಪರಿಶೀಲಿಸಿಯೇ ಇರಲಿಲ್ಲ. ಕೃಷ್ಣ ಐಯ್ಯರ್‌ರನ್ನು ಅಭ್ಯರ್ಥಿಯಾಗಿ ಹೆಚ್ಚು ಕಡಿಮೆ ಆಯ್ಕೆ ಮಾಡಲಾಗಿತ್ತು. ಮೊದಲನೆಯ ಬಾರಿ ಹರ್‍ಯಾಣ ಚುನಾವಣೆ ವಿಜಯದ ನಂತರ ದೇವಿಲ್ಯಾಲ್ ರಿಂದ ಜೈಲ್‌ಸಿಂಗ್‌ರ ಬಗ್ಗೆ ಸೂಚನೆ ಬಂತು. ಬಿ.ಜೆ.ಪಿ. ಇಷ್ಟರವರೆಗೆ ವಿರೋಧ ಪಕ್ಷದ ಅಭ್ಯರ್ಥಿಯ ಹುಡುಕಾಟದಿಂದ ಹೊರಗುಳಿದಿದ್ದರೂ, ಈ ಸೂಚನೆಗೆ ಬಲವಾದ ಬೆಂಬಲ ನೀಡಿತು. ಆದರೆ ಕಮ್ಯೂನಿಸ್ಟ ಪಕ್ಷಗಳು ಕೃಷ್ಣಐಯ್ಯರ್ ಅಭ್ಯರ್ಥಿತನದ ಬಗ್ಗೆ ಖಡಾಖಂಡಿತ ನಿಲುವು ತಾಳಿದ್ದವು.

ಕಮ್ಯೂನಿಸ್ಟ ಪಕ್ಷಗಳು ರಶ್ಯಾದ 'ಆಣತಿ' ಮೇರೆಗೆ ಶ್ರೀ ಕೃಷ್ಣ ಐಯ್ಯರ್ ಅಭ್ಯರ್ಥಿತನದ ಬಗ್ಗೆ ಒತ್ತಾಯ ಮಾಡಿದವು ಎಂಬ ಬಿ.ಜೆ.ಪಿ. ಆಪಾದನೆಗೆ ಬಲವಾದ ಕಾರಣವಿದೆ. ಜನತಾದಿಂದ ಬೇರೆಯಾದ ಬಿ.ಜೆ.ಪಿ. ತಾನೇ ಕಾಂಗ್ರೈಗೆ ಬದಲಿ ಎಂದು ಕೆಲವು ಸಮಯ ಓಡಾಡಿ, ಅದು ವಿಫಲವಾದ ನಂತರ, ವಿರೋಧ ಪಕ್ಷಗಳ ರಂಗ ತನ್ನ ನಾಯಕತ್ವದಲ್ಲಿರಬೇಕೆಂದು ಪ್ರಯತ್ನಗಳನ್ನು ಮಾಡಿತು. ಇದೇ ಉದ್ದೇಶದಿಂದ 1983-84ರ ಮೊದಲ ವಿರೋಧ ಪಕ್ಷಗಳ ಸಮಾವೇಶದಲ್ಲಿ ಭಾಗವಹಿಸಿತು. ಆದರೆ ಇದು ಫಲಿಸುವ ಸೂಚನೆಗಳು ಕಂಡು ಬಾರದೆ, ಉಳಿದ ಸಮಾವೇಶಗಳಲ್ಲಿ ಅದು ಭಾಗವಹಿಸಲಿಲ್ಲ. ನಂತರದ ಸಮಾವೇಶಗಳಿಂದ ರೂಪಿತವಾದ ಎಡ ಮತ್ತು ಜಾತ್ಯತೀತ ಪಕ್ಷಗಳ ರಂಗ ಬಿ.ಜೆ.ಪಿ ಯ ಉದ್ದೇಶಕ್ಕೆ ವ್ಯತಿರಿಕ್ತವಾಗಿತ್ತು. ಅದರ ಉದ್ದೇಶವಿದ್ದದ್ದು ಕಮ್ಯುನಿಸ್ಟ್-ವಿರೋಧಿ ಪಕ್ಷಗಳ ರಂಗ ಕಟ್ಟುವುದು. ಶ್ರಿ ಕೃಷ್ಣ ಐಯ್ಯರ್ ವಿರೋಧ ಪಕ್ಷಗಳ ಸಾಮಾನ್ಯ ಅಭ್ಯರ್ಥಿಯಾಗಿ ಆಯ್ಕೆ, ಬೆಳೆಯುತ್ತಿರುವ ಎಡ ಮತ್ತು ಜಾತ್ಯತೀತ ಪಕ್ಷಗಳ ಐಕ್ಯ ಕ್ರಿಯಾಚರಣೆಯ ಫಲ. ಎಡ ಪಕ್ಷಗಳನ್ನು ಪ್ರತ್ಯೇಕಿಸುವ ಇನ್ನೊಂದು ಪ್ರಯತ್ನ [ಜೈಲ್‌ಸಿಂಗ್‌ರನ್ನು ವಿರೋಧ ಪಕ್ಷದ ಅಭ್ಯರ್ಥಿ ಮಾಡುವುದು]ಫಲಿಸದೆ ಹೋದ, ತನ್ನ ವಿಫಲತೆಯನ್ನು ಮುಚ್ಚಿಕೊಳ್ಳಲು ಈ ಆಪಾದನೆಗಳನ್ನು ಮಾಡುತ್ತಿದೆ. ಗುತ್ತೇದಾರಿ ಬೂರ್ಜ್ವಾ ಪತ್ರಿಕೆಗಳು ಈ ಸಂದರ್ಭದಲ್ಲಿ ಬಿ.ಜೆ.ಪಿ.ಯ ತುತ್ತೂರಿಯಂತೆ ಆಡಿದವು. ಆದರೆ ಈ ಯಾವ ಸಂಚು ಫಲಿಸಲಿಲ್ಲ. ಮುಂದೆಯೂ ಎಡ ಮತ್ತು ಜಾತ್ಯತೀತ ಪಕ್ಷಗಳ ಐಕ್ಯ ಕಾರ್ಯಾಚರಣೆ ಮುರಿಯುವುದರಲ್ಲಿ ಸಫಲವಾಗದಂತೆ ನೋಡಿಕೊಳ್ಳಬೇಕಾಗಿದೆ.

●

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor P· RamachandraRao
Managing Editor : N. K. Upadhyaya